ಸಭಾಧ್ಯಕ್ಷರು : ಮಂಡಿಸಲಾಯಿತು.

3. ಸಂತಾಪ ಸೂಚನೆಗಳು

ಸಭಾಧ್ಯಕ್ಷರು : ವಿಧಾನಸಭೆಯ ಹಾಲಿ ಸದಸ್ಯರು, ಮಾಜಿ ಸಚಿವರು ಆದ ಶ್ರೀ ಅಜೀಜ್ ಸೇಠ್, ವಿಧಾನಸಭೆಯ ಮಾಜಿ ಸದಸ್ಯರು ಹಾಗೂ ಮಾಜಿ ಸಚಿವರಾದ ಶ್ರೀ ಜಿ.ಬಿ.ಶಂಕರ್ ರಾವ್, ವಿಧಾನಸಭಯ ಮಾಜಿ ಸದಸ್ಯರುಗಳಾಗಿದ್ದ ಶ್ರೀ ಕೆ.ಎಂ.ದೊರೆಸ್ವಾಮಿ ನಾಯ್ಡು, ಶ್ರೀ ಆರ್.ಸಿ. ಬಾಳೆಕುಂದರಗಿ, ಶ್ರೀ ಶೀರ್ನಾಳಿ ಚಂದ್ರಶೇಖರ್, ಶ್ರೀ ಎಸ್.ರಾಜಗೋಪಾಲ್, ಡಾ|| ಮಹದೇವ ಬಣಕಾರ್, ಶ್ರೀ ಜಿ.ಬಸಪ್ಪ ಹಾಗೂ ಶ್ರೀ ರಾಜಾ ವೆಂಕಟಪ್ಪ ನಾಯಕ್, ಲೋಕಸಭೆಯ ಹಾಲಿ ಸದಸ್ಯರಾಗಿದ್ದ ಶ್ರೀ ಎಂ.ವಿ.ಚಂದ್ರಶೇಖರ ಮೂರ್ತಿ, ಮಾಜಿ ಸಚಿವರಾಗಿದ್ದ ಶ್ರೀ ಟಿ.ಎನ್.ನರಸಿಂಹಮೂರ್ತಿ ಅವರುಗಳು ನಿಧನರಾಗಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸುತ್ತಿದ್ದೇನೆ.

1. ಶ್ರೀ ಅಜೀಜ್ ಸೇಠ್

ವಿಧಾನಸಭೆಯ ಹಾಲಿ ಸದಸ್ಯರು, ಮಾಜಿ ಸಚಿವರು, ಮಾಜಿ ಲೋಕಸಭಾ ಸದಸ್ಯರು ಆಗಿದ್ದ ಶ್ರೀ ಅಜೀಜ್ ಸೇಠ್ ಅವರು 1921ನೇ ಇಸವಿ ಜನವರಿ 1ರಂದು ಮೈಸೂರು ನಗರದಲ್ಲಿ ಜನಿಸಿ, ಮೈಸೂರು ಆಲಿಘಡದಲ್ಲಿ ವ್ಯಾಸಂಗ ಮಾಡಿದ್ದು ಸಾರ್ವಜನಿಕ ಸೇವೆಯಲ್ಲಿ ಆಸಕ್ತಿ ಹೊಂದಿ ಕಾರ್ಯನಿರ್ವಹಿಸಿದವರು. ಕಾರ್ಮಿಕ ಸಂಘಟನೆಗಳಲ್ಲಿ ಹೆಚ್ಚಿನ ಆಸಕ್ತಿ ವಹಿಸಿ, ಮೈಸೂರಿನಲ್ಲಿ ಬೀಡಿ ಕಾರ್ಮಿಕರ ಸಂಘದ ಅಧ್ಯಕ್ಷರಾಗಿ, 1953 ರಿಂದ 1962ರವರೆಗೆ ಮೈಸೂರು ನಗರದ ಮುನಿಸಿಪಲ್ ಕೌನ್ಸಿಲರ್ ಆಗಿ, 1960 ರಿಂದ 1966ರವರೆಗೆ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾಗಿದ್ದರು. 1967ರಲ್ಲಿ ಮೈಸೂರಿನಿಂದ ಪಕ್ಷೇತರರಾಗಿ ವಿಧಾನಸಭೆಗೆ ಆಯ್ಕೆಯಾಗಿ, 1972ರಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ಪುನರಾಯ್ಕೆಗೊಂಡು, ಕಾರ್ಮಿಕ, ಸಾರಿಗೆ, ಪ್ರವಾಸೋದ್ಯಮ ಮತ್ತು ವಕ್ಫ್ ಖಾತೆ ಸಚಿವರಾಗಿ ಕಾರ್ಯ ನಿರ್ವಹಿಸಿದರು. 1973 ರಿಂದ 77ರವರೆಗೆ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದ ಶ್ರೀಯುತರು 1978ರಲ್ಲಿ ವಿಧಾನಸಭೆಗೆ ಆಯ್ಕೆಗೊಂಡು ಕೈಗಾರಿಕಾ ಖಾತೆ ಸಚಿವರಾಗಿ ಸೇವೆ ಸಲ್ಲಿಸಿರುತ್ತಾರೆ. 1983ರಲ್ಲಿ ಕ್ರಾಂತಿರಂಗದಿಂದ ವಿಧಾನಸಭೆಗೆ ಚುನಾಯಿತರಾಗಿ ಜುಲೈ 1984ರವರೆಗೆ ಕಾರ್ಮಿಕ ಮತ್ತು ವಕ್ಫ್ ಖಾತೆ ಸಚಿವರಾಗಿದ್ದರು. 1984ರಲ್ಲಿ ಧಾರವಾಡ ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿ ಸಲ್ಲಿಸಿರುತ್ತಾರೆ. 1989ರಲ್ಲಿ ಒಂಭತ್ತನೇ ವಿಧಾನಸಭೆಗೆ ಮತ್ತೆ ಆಯ್ಕೆಯಾಗಿ ಕಂದಾಯ, ಸಾರಿಗೆ ಮತ್ತು ವಕ್ಫ್ ಖಾತೆ ಸಚಿವರಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು 1999ರಲ್ಲಿ ಹನ್ನೊಂದನೇ ವಿಧಾನಸಭೆಗೆ ಆಯ್ಕೆಯಾಗಿ ಪ್ರೊಟೆಮ್ ಸ್ಪೀಕರ್ ಆಗಿ ನೇಮಕಗೊಂಡು ವಿಧಾನಸಭೆಯ ಸದಸ್ಯರುಗಳಿಗೆ ಪ್ರಮಾಣ ವಚನ

ಬೋಧಿಸಿದ್ದರು.

ರಾಜ್ಯದ ಅದರಲ್ಲೂ ವಿಶೇಷವಾಗಿ ಕಾರ್ಮಿಕರ ಏಳಿಗೆಗಾಗಿ ಅವಿರತವಾಗಿ ಸೇವೆ ಸಲ್ಲಿಸುತ್ತಿದ್ದ ಶ್ರೀ ಅಜೀಜ್ ಸೇಠ್ ಅವರು ದಿನಾಂಕ 28-12-2001ರಂದು ನಿಧನ ಹೊಂದಿದರು.

2. ಶ್ರೀ ಜಿ.ಬಿ.ಶಂಕರ್‌ರಾವ್

ವಿಧಾನಸಭೆಯ ಮಾಜಿ ಸದಸ್ಯರಾದ ಶ್ರೀ ಜಿ.ಬಿ.ಶಂಕರ ರಾವ್ ಅವರು ವೃತ್ತಿಯಲ್ಲಿ ನ್ಯಾಯವಾದಿಗಳಾಗಿದ್ದರು. ಸಮುದಾಯ ಅಭಿವೃದ್ಧಿಯ ಕುರಿತು ಮುಸ್ಸೋರಿಯಲ್ಲಿ ತರಬೇತಿ ಪಡೆದಿದ್ದ ಶ್ರೀಯುತರು ಹಲವಾರು ಶಿಕ್ಷಣ ಸಂಸ್ಥೆಗಳೊಡನೆ ನಿಕಟ ಬಾಂಧವ್ಯವನ್ನು ಇಟ್ಟುಕೊಂಡಿದ್ದರು. ಎರಡು, ಮೂರು, ನಾಲ್ಕು ಹಾಗೂ ಆರನೇ ವಿಧಾನ ಸಭೆಯ ಸದಸ್ಯರಾಗಿ ಆಯ್ಕೆಗೊಂಡಿದ್ದ ಶ್ರೀಯುತರು ಲೋಕೋಪಯೋಗಿ ಮಂತ್ರಿಯವರ ಸಂಸದೀಯ ಕಾರ್ಯದರ್ಶಿಯಾಗಿ, ಕಂದಾಯ ಇಲಾಖೆಯ ಉಪ ಸಚಿವರಾಗಿ, ಪಶುಸಂಗೋಪನೆ ಮತ್ತು ಡೇರಿ ಅಭಿವೃದ್ಧಿ ಇಲಾಖೆಯ ರಾಜ್ಯ ಸಚಿವರಾಗಿ ಹಾಗೂ 1980 ರಿಂದ 1983ರ ಅವಧಿಯಲ್ಲಿ ಶಿಕ್ಷಣ ಸಚಿವರಾಗಿ ಕಾರ್ಯ ನಿರ್ವಹಿಸಿದ್ದು, ಎರಡು ಬಾರಿ ಸೋವಿಯತ್ ರಷ್ಯಾಕ್ಕೆ ಅಧ್ಯಯನ ಪ್ರವಾಸವನ್ನು ಕೈಗೊಂಡಿದ್ದರು.

ಶ್ರೀಯುತರು ದಿನಾಂಕ 10-01-2002ರಂದು ನಿಧನ ಹೊಂದಿದರು.

3. ಶ್ರೀ ಕೆ.ಎಂ.ದೊರೆಸ್ವಾಮಿ ನಾಯ್ಡು

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಕೆ.ಎಂ.ದೊರೆಸ್ವಾಮಿ ನಾಯ್ಡು ಅವರು ಕೋಲಾರ ಜಿಲ್ಲೆ ಬೇತಮಂಗಲದಲ್ಲಿ ಜನಿಸಿದ್ದು, ಕೃಷಿಕರಾಗಿದ್ದರು. ತಾಲ್ಲೂಕು ಬೋರ್ಡಿನ ಅಧ್ಯಕ್ಷರಾಗಿ 12 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದ ಶ್ರೀಯುತರು ಐದನೇ ವಿಧಾನಸಭೆಗೆ ಬೇತಮಂಗಲ ಕ್ಷೇತ್ರದಿಂದ ಆಯ್ಕೆಯಾಗಿ ಕಾರ್ಯನಿರ್ವಹಿಸಿದ್ದರು.

ಶ್ರೀಯುತರು ದಿನಾಂಕ 19-8-2001 ರಂದು ನಿಧನ ಹೊಂದಿದರು.

ಶ್ರೀ ಆರ್.ಸಿ.ಬಾಳೆಕುಂದರಗಿ

ವಿಧಾನಸಭೆಯ ಮಾಜಿ ಸದಸ್ಯರಾದ ಶ್ರೀ ಆರ್.ಸಿ.ಬಾಳೆಕುಂದರಗಿ ಅವರು 1937ನೇ ಇಸವಿ ಜೂನ್ 13ರಂದು ಜನಿಸಿದ್ದು, ಕೃಷಿಕರಾಗಿದ್ದರು. ಬೈಲಹೊಂಗಲದ ಡೈರಿ ಸೊಸೈಟಿಯ ಸಂಸ್ಥಾಪಕ ಅಧ್ಯಕ್ಷರಾಗಿ, ಕೆ.ಆರ್.ಸಿ.ಎಸ್.ನ ಕಲೆ ಮತ್ತು ವಿಜ್ಞಾನ ಕಾಲೇಜಿನ ಆಡಳಿತ ಮಂಡಳಿ, ತಾಲ್ಲೂಕು ಸಮನ್ವಯ ಸಮಿತಿ, ಭೂನ್ಯಾಯಾಧೀಕರಣದ ಸದಸ್ಯರಾಗಿ ಬಡ ಜನರ ಅಭಿವೃದ್ಧಿಗೆ ಕಾರ್ಯ ನಿರ್ವಹಿಸುತ್ತಿದ್ದ ಶ್ರೀಯುತರು ಆರನೇ ಹಾಗೂ ಏಳನೇ ವಿಧಾನಸಭೆಗೆ ಬೈಲಹೊಂಗಲ ಕ್ಷೇತ್ರದಿಂದ

ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 20-8-2001 ರಂದು ನಿಧನ ಹೊಂದಿದರು.

5. ಶ್ರೀ ಶೀನಾಳಿ ಚಂದ್ರಶೇಖರ್

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಶೀನಾಳಿ ಚಂದ್ರಶೇಖರ್ ಅವರು 1933ನೇ ಇಸವಿ ಏಪ್ರಿಲ್ 14ರಂದು ತೀರ್ಥಹಳ್ಳಿಯಲ್ಲಿ ಜನಿಸಿದ್ದು, ವೃತ್ತಿಯಲ್ಲಿ ನ್ಯಾಯವಾದಿಯಾಗಿದ್ದರು. ವಿದ್ಯಾರ್ಥಿ ದಿಸೆಯಿಂದಲೇ ಕಾಂಗ್ರೆಸ್ ಮುಖಂಡರಾಗಿದ್ದು ಶಿವಮೊಗ್ಗ ಜಿಲ್ಲೆಯ ಕಾಂಗ್ರೆಸ್ ಅಧ್ಯಕ್ಷರಾಗಿ, ಸಾಮಾಜಿಕ ಚಟುವಟಿಕೆಗಳಲ್ಲಿ ಆಸಕ್ತಿ ವಹಿಸಿದ್ದ ಶ್ರೀಯುತರು ಹಲವಾರು ಸಂಘ ಸಂಸ್ಥೆಗಳಲ್ಲಿ ಸಕ್ರಿಯ ಪಾತ್ರ ವಹಿಸಿ ದುಡಿಯುತ್ತಿದ್ದರು. ರಾಷ್ಟ್ರೀಯ ಯುವ ಕಾಂಗ್ರೆಸ್‌ನ್ನು ಪ್ರತಿನಿಧಿಸಿ ಅಮೇರಿಕಾ ಹಾಗೂ ಯುರೋಪ್ ರಾಷ್ಟ್ರಗಳಿಗೂ ಭೇಟಿ ನೀಡಿದ್ದರು. ಶ್ರೀಯುತರು ಐದನೇ ಹಾಗೂ ಆರನೇ ವಿಧಾನಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 24-8-2001ರಂದು ನಿಧನ ಹೊಂದಿದರು.

6. ಶ್ರೀ ಎಸ್.ರಾಜಗೋಪಾಲ್

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಸ್.ರಾಜಗೋಪಾಲ್ ಅವರು 1933ನೇ ಇಸವಿ ನವೆಂಬರ್ 6ರಂದು ಕೆ.ಜಿ.ಎಫ್‌ನ ಮಾರಿಕುಪ್ಪಂನಲ್ಲಿ ಜನಿಸಿದ್ದು ಕಾರ್ಮಿಕ ಸಂಘಟನೆಗಳ ಮುಂಚೂಣಿಯಲ್ಲಿದ್ದರು. 1949ರಲ್ಲಿ ಕಾರ್ಮಿಕ ಚಳವಳಿಯಲ್ಲಿ ತೊಡಗಿದ್ದರಿಂದ ಬಂಧನಕ್ಕೊಳಗಾಗಿದ್ದ ಶ್ರೀಯತರು ಹಲವಾರು ಸಂಘ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿದ್ದರು. ಗಣಿ ಕ್ರೀಡಾಂಗಣ ಸಮಿತಿಯ ಹಾಗೂ ಇತರೆ ಕಲ್ಯಾಣ ಸಂಸ್ಥೆ ಮತ್ತು ಶಾಲಾ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಶ್ರೀಯುತರು ಮೂರನೇ ಹಾಗೂ ನಾಲ್ಕನೇ ವಿಧಾನಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 16-9-2001ರಂದು ನಿಧನ ಹೊಂದಿದರು.

7. ಡಾ॥ಮಹದೇವ ಬಣಕಾರ್

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಡಾ॥ಮಹದೇವ ಬಣಕಾರ್ ಅವರು 1932ನೇ ಇಸವಿ ಅಕ್ಟೋಬರ್ 3ರಂದು ಧಾರವಾಡ ಜಿಲ್ಲೆ ಬ್ಯಾಡಗಿ ತಾಲ್ಲೂಕು ಮೋಟೆಬೆನ್ನೂರು ಗ್ರಾಮದಲ್ಲಿ ಜನಿಸಿದ್ದು ಸಾಹಿತಿಗಳಾಗಿದ್ದರು. ಕಥೆ, ಕಾವ್ಯ, ನಾಟಕ ಹಾಗೂ ವಚನ ಸಾಹಿತ್ಯದಲ್ಲಿ ಕೃಷಿ ಮಾಡಿದ ಶ್ರೀಯುತರು ಪತ್ರಕರ್ತರಾಗಿಯೂ ಸೇವೆ ಸಲ್ಲಿಸಿದ್ದರು. ಹುಬ್ಬಳ್ಳಿಯ ನವಯುಗ ಪತ್ರಿಕೆಯ ಸಹಾಯಕ ಸಂಪಾದಕರಾಗಿ ಕಾರ್ಯ ನಿರ್ವಹಿದ್ದ ಶ್ರೀಯುತರು 1967ರಲ್ಲಿ ವಿಧಾನಸಭೆಗೆ

ಆಯ್ಕೆಯಾಗಿದ್ದರು. ಕನ್ನಡ ಕಾವಲು ಸಮಿತಿ, ಕನ್ನಡ ಸರಳೀಕರಣ ಹಾಗೂ ಪತ್ರಾಗಾರ ವೀಕ್ಷಣಾ ಸಮಿತಿಯ ಸದಸ್ಯರಾಗಿ ಹಾಗೂ 1995ರಿಂದ ಐದು ವರ್ಷಗಳ ಕಾಲ ವಿಧಾನಪರಿಷತ್ತಿನ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು.

ಶ್ರೀಯತರು ದಿನಾಂಕ 17-11-2001ರಂದು ನಿಧನ ಹೊಂದಿದರು.

8. ಶ್ರೀ ಜಿ.ಬಸಪ್ಪ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಜಿ.ಬಸಪ್ಪ ಅವರು 1917ನೇ ಇಸವಿ ಫೆಬ್ರವರಿ 24ರಂದು ಜನಿಸಿದ್ದು ವೃತ್ತಿಯಲ್ಲಿ ಕೃಷಿಕರಾಗಿದ್ದರು. ಸ್ವಾತಂತ್ರ ಹೋರಾಟಗಾರರಾಗಿದ್ದ ಇವರು 1942ರಿಂದ 1947ರವರೆಗೆ ನಡೆದ ಚಳುವಳಿಯಲ್ಲಿ ಪಾಲ್ಗೊಂಡಿದ್ದಲ್ಲದೆ, 1947ರಲ್ಲಿ ಜವಾಬ್ದಾರಿಯುತ ಸರ್ಕಾರದ ರಚನೆಗಾಗಿ ನಡೆದ ಚಳುವಳಿಯಲ್ಲಿ ಬಂಧನಕ್ಕೊಳಗಾಗಿದ್ದರು. ಹೊಸದುರ್ಗದ ಪಿ.ಎಲ್.ಡಿ. ಬ್ಯಾಂಕ್‌ನಲ್ಲಿ 15 ವರ್ಷ, ವ್ಯವಸಾಯ ಸೇವಾ ಸಹಕಾರ ಸಂಘ, ತಾಲ್ಲೂಕು ಮಾರ್ಕೆಟಿಂಗ ಸೊಸೈಟಿ, ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿ, ಇಂಡಸ್ಟ್ರೀಯಲ್ ಕೋ-ಆಪರೇಟಿವ್ ಸೊಸೈಟಿಗಳ ಅಧ್ಯಕ್ಷರಾಗಿ, ಚಿತ್ರದುರ್ಗ ಡಿ.ಸಿ.ಸಿ. ಬ್ಯಾಂಕಿನ ನಿರ್ದೇಶಕರಾಗಿ, ಬೆಂಗಳೂರಿನ ರಾಜ್ಯ ಭೂ ಅಭಿವೃದ್ಧಿ ಬ್ಯಾಂಕ್, ಅಪೆಕ್ಸ್ ಬ್ಯಾಂಕ್‌ನ ನಿರ್ದೇಶಕರಾಗಿ, ದಾವಣಗೆರೆಯ ನಿಯಂತ್ರಿತ ಮಾರುಕಟ್ಟೆ ಸಮಿತಿಯ ನಿರ್ದೇಶಕರಾಗಿ ಹಾಗೂ ಇತರೆ ಹಲವಾರು ಶೈಕ್ಷಣಿಕ ಸಂಸ್ಥೆಗಳ ಪದಾಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದ ಶ್ರೀಯುತರು 1945 ರಿಂದ 1949ರವರೆಗೆ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ, 1952 ರಿಂದ 1957ರವರೆಗೆ ಹಾಗೂ 1983ರಿಂದ 1985ರವರೆಗೆ ವಿಧಾನಸಭೆಯ ಸದಸ್ಯರಾಗಿಯೂ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ 12-12-2001ರಂದು ನಿಧನ ಹೊಂದಿದರು.

9. ಶ್ರೀ ರಾಜಾ ವೆಂಕಟಪ್ಪ ನಾಯಕ್

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ರಾಜಾ ವೆಂಕಟಪ್ಪ ನಾಯಕ್ ಅವರು ನ್ಯಾಯವಾದಿಗಳಾಗಿದ್ದರು. ಸ್ವಾತಂತ್ರ ಹೋರಾಟಗಾರರಾಗಿದ್ದ ಶ್ರೀಯುತರು ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದಲ್ಲಿ ಪದವಿ ಹಾಗೂ ಲಂಡನ್ನಿನ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಕಾನೂನು ಪದವಿಗಳನ್ನು ಪಡೆದಿದ್ದರು. ಹೈದರಾಬಾದ್ ಕರ್ನಾಟಕ ವಿಮೋಚನಾ ಹೋರಾಟದ ಮುಖಂಡರಾಗಿದ್ದ ಶ್ರೀಯುತರು 1967ರಲ್ಲಿ ವಿಧಾನಸಭೆಗೆ ಆಯ್ಕೆಯಾಗಿ ಮೂರು ತಿಂಗಳು ಸೇವೆ ಸಲ್ಲಿಸಿ, 1967 ರಿಂದ 1970ರವರೆಗೆ ರಾಯಚೂರಿನಿಂದ ಲೋಕಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 24-12-2001 ರಂದು ನಿಧನ ಹೊಂದಿದರು.

10. ಶ್ರೀ ಎಂ.ವಿ.ಚಂದ್ರಶೇಖರ ಮೂರ್ತಿ(ಲೋಕಸಭಾ ಸದಸ್ಯರು)

ಲೋಕಸಭೆಯ ಹಾಲಿ ಸದಸ್ಯರಾಗಿದ್ದ ಶ್ರೀ ಎಂ.ವಿ.ಚಂದ್ರಶೇಖರ ಮೂರ್ತಿ ಅವರು 1941ನೇ ಇಸವಿ ಸೆಪ್ಟೆಂಬರ್ 1 ರಂದು ಮಂಡ್ಯ ಜಿಲ್ಲೆ ಮಳವಳ್ಳಿಯಲ್ಲಿ ಜನಿಸಿದ್ದು, ಕೃಷಿಕರೂ ಹಾಗೂ ನ್ಯಾಯವಾದಿಯಾಗಿದ್ದರು. 1977ರಲ್ಲಿ ಆರನೇ ಲೋಕಸಭೆಗೆ ಆಯ್ಕೆಯಾಗಿ ಸತತವಾಗಿ 1996ರವರೆಗೆ ಹತ್ತನೇ ಲೋಕಸಭೆಯವರೆಗೆ ಕನಕಪುರ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಲೋಕಸಭೆಯ ವಿವಿಧ ಸಮಿತಿಗಳ ಸದಸ್ಯರಾಗಿ, ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು 1993ರಿಂದ 96ರವರೆಗೆ ಕೇಂದ್ರ ಸರ್ಕಾರದ ಹಣಕಾಸು (ಕಂದಾಯ ಹಾಗೂ ವೆಚ್ಚ) ರಾಜ್ಯ ಸಚಿವರಾಗಿಯೂ ಸೇವೆ ಸಲ್ಲಿಸಿದ್ದರು. 13ನೇ ಲೋಕಸಭೆಗೆ ಮತ್ತೆ ಚುನಾಯಿತರಾಗಿ ಕಾರ್ಯ ನಿರ್ವಹಿಸುತ್ತಿದ್ದ ಶ್ರೀಯುತರು ರಾಜ್ಯದ ಅಭಿವೃದ್ಧಿಗೆ ಅಪಾರವಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ 21-11-2001ರಂದು ನಿಧನ ಹೊಂದಿದರು.

11. ಶ್ರೀ ಟಿ.ಎನ್.ನರಸಿಂಹಮೂರ್ತಿ (ಮಾಜಿ ಸಚಿವರು)

ವಿಧಾನಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಶ್ರೀ ಟಿ.ಎನ್.ನರಸಿಂಹಮೂರ್ತಿ ಅವರು ವೃತ್ತಿಯಲ್ಲಿ ನ್ಯಾಯವಾದಿಯಾಗಿದ್ದರು. ವಿದ್ಯಾರ್ಥಿ ದಿಸೆಯಿಂದಲೇ ನಾಯಕತ್ವದ ಗುಣ ಬೆಳೆಸಿಕೊಂಡಿದ್ದ ಶ್ರೀಯುತರು ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿ, ರಾಜ್ಯ ವಯಸ್ಕರ ಶಿಕ್ಷಣ ಮಂಡಳಿಯ ಸದಸ್ಯರಾಗಿ, ಹಲವಾರು ಸಂಘ ಸಂಸ್ಥೆಗಳ ಪದಾಧಿಕಾರಿಗಳಾಗಿ, ದೀನ ದಲಿತರ ಉದ್ಧಾರಕ್ಕಾಗಿ ದುಡಿಯುತ್ತಿದ್ದರು. 1970ರಲ್ಲಿ ಪ್ರಥಮ ಬಾರಿಗೆ ವಿಧಾನಪರಿಷತ್ತಿಗೆ ಆಯ್ಕೆಯಾದ ಶ್ರೀಯುತರು 1999ರವರೆಗೂ ಸತತವಾಗಿ ಸದಸ್ಯರಾಗಿದ್ದರು. ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ನಿಗಮದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ಶ್ರೀಯತರು ವಿಧಾನಪರಿಷತ್ತಿನ ವಿರೋಧಪಕ್ಷದ ನಾಯಕರಾಗಿ, ಉಪ ಸಭಾಪತಿಗಳಾಗಿ, ಹಂಗಾಮಿ ಸಭಾಪತಿಗಳಾಗಿಯೂ ಕಾರ್ಯ ನಿರ್ವಹಿಸಿದ್ದ ಶ್ರೀಯುತರು ವಿಧಾನ ಮಂಡಲದ ವಿವಿಧ ಸಮಿತಿಗಳಲ್ಲಿ ಅಧ್ಯಕ್ಷರಾಗಿ ಹಾಗೂ ಸದಸ್ಯರಾಗಿಯೂ ಸೇವೆ ಸಲ್ಲಿಸಿರುತ್ತಾರೆ. ಮೀನುಗಾರಿಕೆ ಹಾಗೂ ಬಂದರು, ವಸತಿ ಹಾಗೂ ನಗರಾಭಿವೃದ್ಧಿ ರಾಜ್ಯ ಸಚಿವರಾಗಿ 1989ರಲ್ಲಿ ನೇಮಕಗೊಂಡಿದ್ದ ಶ್ರೀಯುತರು ನಂತರ 1990ರಲ್ಲಿ ಆಹಾರ ಮತ್ತು ನಾಗರೀಕ ಪೂರೈಕೆ ಖಾತೆ ಸಚಿವರಾಗಿಯೂ ಸೇವೆ ಸಲ್ಲಿಸಿದ್ದಾರೆ. ಹಾಲಿ ಕರ್ನಾಟಕ ರಾಜ್ಯದ ಎರಡನೇ ಹಣಕಾಸು ಆಯೋಗದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದರು.

ಶ್ರೀಯುತರು ದಿನಾಂಕ 26-10-2001ರಂದು ನಿಧನ ಹೊಂದಿದರು.

ಭಯೋತ್ಪಾದಕರ ಧಾಳಿಯಿಂದ ಅಸುನೀಗಿದ ಭದ್ರತಾ ಸಿಬ್ಬಂದಿಗಳಿಗೆ ಗೌರವ ಸಲ್ಲಿಸುವುದು.

11ನೆಯ ಸೆಪ್ಟೆಂಬರ್ 2001ರಂದು ನ್ಯೂಯಾರ್ಕ್‌ನ ವಿಶ್ವ ವಾಣಿಜ್ಯ ಕೇಂದ್ರದ ಅವಳಿ ಗೋಪುರಗಳ ಮೇಲೆ ಮತ್ತು ವಾಷಿಂಗ್‌ಟನ್‌ನ ಪೆಂಟಗಾನ್ ಕಟ್ಟಡದ ಮೇಲೆ ಭಯೋತ್ಪಾದಕರು ನಡೆಸಿದ ದಾಳಿಯಿಂದಾಗಿ ಇಡೀ ವಿಶ್ವ ದುಃಖ ಸಾಗದಲ್ಲಿ ಮುಳುಗಿತು. ಇದರಿಂದ ಭಯೋತ್ಪಾದನೆಯ ಅನಿಷ್ಟಗಳ ಬಗ್ಗೆ ಹೊಸ ಅರಿವು ಮೂಡಿತು. ಭಾರತದಲ್ಲಿ ಜಮ್ಮು ಮತ್ತು ಕಾಶ್ಮೀರದ ವಿಧಾನ ಸಭೆಯ ಮೇಲೆ ಹಾಗೂ ಕಳೆದ ಡಿಸೆಂಬರ್ 13ರಂದು ಸಂಸತ್ ಭವನದ ಮೇಲೆ ಭಯೋತ್ಪಾದಕರು ನಡೆಸಿದ ದಾಳಿಗಳು ನಮ್ಮ ಪ್ರಜಾಪ್ರಭುತ್ವದ ಮೇಲೆಯೇ ಎಸಗಿದ ಆಕ್ರಮಣವಾಗಿದೆ. ಭದ್ರತಾ ಸಿಬ್ಬಂದಿಯ ಜಾಗ್ರತ ಕಾರ್ಯಾಚರಣೆಯಿಂದಾಗಿ ಸಂಸತ್ ಭವನದ ಮೇಲೆ ನಡೆದ ದಾಳಿ ಯಶಸ್ವಿಯಾಗಲಿಲ್ಲ. ತಮ್ಮ ಪ್ರಾಣವನ್ನು ಬಲಿಗೊಟ್ಟು ನಮ್ಮ ಅನೇಕ ಸಂಸತ್ ಸದಸ್ಯರನ್ನು ಹಾಗೂ ದೇಶದ ಘನತೆಯನ್ನು ಕಾಪಾಡಿದ ಆ ಭದ್ರತಾ ಸಿಬ್ಬಂದಿಗೆ ಗೌರವ ಸಲ್ಲಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ.

+ ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಗಳು):- ಮಾನ್ಯ ಸಭಾಧ್ಯಕ್ಷರೇ, ಈ ರಾಜ್ಯದ ಮತ್ತು ಈ ಸದನದ ಹಲವಾರು ಗಣ್ಯರು ನಮ್ಮನ್ನು ಅಗಲಿ ಹೋಗಿದ್ದಾರೆ. ಸಂತಾಪ ಸೂಚನೆಗಳ ಮೂಲಕ ಅವರನ್ನು ಸ್ಮರಿಸಿಕೊಳ್ಳುವ ಬಗ್ಗೆ ತಾವು ನಿರ್ಣಯವನ್ನು ಮಂಡಿಸಿದ್ದೀರಿ. ನಾನು ಅತ್ಯಂತ ದುಃಖಿತನಾಗಿ ಈ ಸಭೆಯ ಪರವಾಗಿ ಅಗಲಿರುವ ಚೇತನಗಳನ್ನು ಸ್ಮರಿಸಿಕೊಳ್ಳುವಲ್ಲಿ ನಾಲ್ಕು ಮಾತುಗಳನ್ನು ಸಭೆಯ ಮುಂದೆ ಮಂಡಿಸುವ ಪ್ರಯತ್ನ ಮಾಡುತ್ತೇನೆ.

ನನ್ನ ಆತ್ಮೀಯ ಸ್ನೇಹಿತರಾದ, ಕಳೆದ ನಲವತ್ತು ವರ್ಷಗಳ ಕಾಲ ಒಂದಲ್ಲ ಒಂದು ರೀತಿಯಲ್ಲಿ ಕೀರ್ತಿಶೇಷರಾದಂಥ ಶ್ರೀ ಅಜೀಜ್ ಸೇಠ್‌ರವರ ಜೊತೆಯಲ್ಲಿ ಕೆಲಸ ಮಾಡತಕ್ಕಂಥ ಅವಕಾಶ ನನಗೆ ಸಿಕ್ಕಿತ್ತು. ಅವರು ಕುಟುಂಬಕ್ಕೆ ಮತ್ತು ನನಗೆ ವ್ಯಕ್ತಿಗತವಾದಂಥ, ಭಾವನಾತ್ಮಕವಾದಂಥ ಒಂದು ಸಂಬಂಧವಿತ್ತು. ಅವರು ಹಿರೀಕರು ಮೈಸೂರಿನಲ್ಲಿ ತಮ್ಮದೇ ಆದಂಥ ಒಂದು ವ್ಯಕ್ತಿತ್ವದ ಛಾಪನ್ನು ಬಿಟ್ಟು ಹೋಗಿದ್ದರು. ಸೇಠ್ ಸಾಹೇಬರು ಆ ಒಂದು ಪರಂಪರೆಯನ್ನು ಮುಂದುವರೆಸಿಕೊಂಡು ಬಂದರು. ಸಮಾಜವಾದಿಯಾಗಿ ತಮ್ಮ ಸಾರ್ವಜನಿಕ ಜೀವನಕ್ಕೆ ಪಾದಾರ್ಪಣೆ ಮಾಡಿದರೂ ಸಹ ಹಲವಾರು ಕ್ಷೇತ್ರಗಳಲ್ಲಿ ಅವರು ಕೆಲಸ ಮಾಡಿದರು.

1960ರ ದಶಕದಲ್ಲಿ ವಿಧಾನಪರಿಷತ್ತಿಗೆ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದರು. ಹಾಗೆ ಚುನಾಯಿತರಾದಂಥ ಕಾಲದಲ್ಲಿ ಮಂಡ್ಯ ಜಿಲ್ಲೆಯೂ ಕೂಡ ಆ ಕ್ಷೇತ್ರದ ಒಂದು ಭಾಗವಾಗಿತ್ತು. ಆ ನಂತರ ದೇಶದಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ಒಂದು ಹೊಸ ಆರ್ಥಿಕ ಮತ್ತು ಸಾಮಾಜಿಕ ಸಿದ್ಧಾಂತದ ರೂವಾರಿಗಳಾಗಿ ದೇಶದಲ್ಲಿಯೇ ಒಂದು ಹೊಸ ಆಯಾಮವನ್ನು ನಿರ್ಮಾಣ ಮಾಡಿದಂಥ ಸಂದರ್ಭದಲ್ಲಿ ನಾವೆಲ್ಲರೂ ಜೊತೆಗೂಡಿ ಶ್ರೀಮತಿ

ಇಂದಿರಾಗಾಂಧಿಯವರ ನೇತೃತ್ವದಲ್ಲಿ ಈ ರಾಜ್ಯದಲ್ಲಿ ಮತ್ತು ದೇಶದಲ್ಲಿ ಒಂದು ಹೊಸ ಚಿಂತನೆಯ ಆರಾಧಕರು ನಾವಾದೆವು. 1972ನೇ ಇಸವಿಯಲ್ಲಿ ನಡೆದಂಥ ಸಾರ್ವತ್ರಿಕ ಚುನಾವಣೆಗಳಲ್ಲಿ ಕೀರ್ತಿಶೇಷರಾದಂಥ ದೇವರಾಜ ಅರಸು ಅವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ಒಂದು ದೊಡ್ಡ ಬಹುಮತವನ್ನು ಪಡೆದಂಥ ಸಂದರ್ಭದಲ್ಲಿ ಶ್ರೀ ಸೇಠ್ ಸಾಹೇಬರು ಆ ಮಂತ್ರಿಮಂಡಲದಲ್ಲಿ ಸಚಿವರಾದರು. ಅವರ ಜೊತೆಯಲ್ಲಿ ಸಚಿವನಾಗಿ ಐದು ವರ್ಷಗಳ ಕಾಲ ಕೆಲಸ ಮಾಡತಕ್ಕಂಥ ಅವಕಾಶ ನನಗೆ ಸಿಕ್ಕಿತ್ತು. ಕಾರ್ಮಿಕರ ಬಗ್ಗೆ ವಿಶೇಷವಾದಂಥ ಒಲವು ಶ್ರೀ ಸೇಠ್ ಸಾಹೇಬರದಾಗಿತ್ತು. ಅದರಲ್ಲಿಯೂ ವಿಶೇಷವಾಗಿ ಮೈಸೂರಿನಲ್ಲಿ ಅತ್ಯಂತ ನಿಕೃಷ್ಟತೆಗೆ ಒಳಪಟ್ಟಂಥ ಬೀಡಿ ಕಾರ್ಮಿಕರನ್ನು ಸಂಘಟನೆ ಮಾಡಲು ಶ್ರೀ ಸೇಠ್ ಸಾಹೇಬರು ಅನನ್ಯವಾದಂಥ ರೀತಿಯಲ್ಲಿ ಶ್ರಮಿಸಿದರು. ಅವರಿಗೋಸ್ಕರ ಸಹಸ್ರಾರು ಮನೆಗಳನ್ನು ನಿರ್ಮಾಣ ಮಾಡತಕ್ಕಂಥ ಒಂದು ವಿಶೇಷವಾದಂಥ ಕಾರ್ಯಕ್ರಮವನ್ನು ರೂಪಿಸಿದರು. ಆ ವಿಶೇಷವಾದಂಥ ಕಾರ್ಯಕ್ರಮ ಯಾರು ಶ್ರಮ ಜೀವಿಗಳಾಗಿದ್ದಾರೆ ಆ ಶ್ರಮಜೀವಿಗಳು ಬದುಕಲಿಕ್ಕೆ ಒಂದು ಹೊಸ ಆಶಾಕಿರಣವನ್ನು ಹೊತ್ತಿಸಲಿಕ್ಕೆ ಶ್ರೀ ಸೇಠ್ ಸಾಹೇಬರು ಬಹಳಮಟ್ಟಿಗೆ ಕಾರಣಭೂತರಾದರು. ಅವರು ಎಲ್ಲಾ ಸದನಗಳಲ್ಲಿಯೂ ಕೆಲಸ ಮಾಡಿದ್ದಾರೆ. ವಿಧಾನಪರಿಷತ್ತಿನಲ್ಲಿ, ವಿಧಾನಸಭೆಯಲ್ಲಿ ಮತ್ತು ಲೋಕಸಭೆಯಲ್ಲಿ ಕೆಲಸ ಮಾಡಿದರು. ರಾಜ್ಯಸಭೆ ಒಂದನ್ನು ಬಿಟ್ಟು ಮಿಕ್ಕ ಎಲ್ಲಾ ಪ್ರಾತಿನಿಧಿಕ ಸ್ವರೂಪದ ಸಂಸ್ಥೆಗಳ ಜೊತೆಯಲ್ಲಿ ಅವರು ತಮ್ಮ ಬಾಂಧವ್ಯವನ್ನು ಬೆಳೆಸಿಕೊಂಡಿದ್ದರು. ಮಾನ್ಯ ಸೇಠ್ ಸಾಹೇಬರು ಗತಿಸಲಿಕ್ಕೆ ಸುಮಾರು ಒಂದು ತಿಂಗಳ ಹಿಂದೆ ನನ್ನನ್ನು ಅವರು ಭೇಟಿ ಮಾಡಿದ್ದರು. ಭೇಟಿ ಮಾಡಿದಂಥ ಸಂದರ್ಭದಲ್ಲಿ 'ಸೇಠ್ ಸಾಹೇಬರೆ, ನೀವು ಸಿಗರೇಟ್ ಸೇದುವುದನ್ನು ನಿಲ್ಲಿಸಿದರೋ ಅಥವಾ ಇಲ್ಲವೋ' ಎಂದು ಅವರನ್ನು ನಾನು ಕೇಳಿದೆ. ತಕ್ಷಣ ಸಿಗರೇಟೊಂದನ್ನು ತೆಗೆದು ನನ್ನ ಮುಂದೆಯೇ ಹತ್ತಿಸಿದರು. ಡಾಕ್ಟರುಗಳ ಮಾತನ್ನು ಅವರು ಕೇಳಲಿಲ್ಲ. ಏಕೆಂದರೆ, ಸಿಗರೇಟ್ ಸೇದುವುದನ್ನು ಬಿಟ್ಟರೆ ನೀವು ತೀರಿಹೋಗುತ್ತೀರೆಂದು ಅವರಿಗೆ ಯಾರೋ ಹೇಳಿದ್ದರು. ಆದ್ದರಿಂದ ಆ ಸಿಗರೇಟಿನ ಜೊತೆಯಲ್ಲಿ ದೊಡ್ಡ ಋಣಾನುಬಂಧ ಶ್ರೀ ಸೇಠ್ ಸಾಹೇಬರಿಗೆ ಇತ್ತು. ಅವರಿಗೆ ಅಂತಿಮ ಗೌರವವನ್ನು ಸಲ್ಲಿಸಲಿಕ್ಕೆ ನಾನು ಹೋದಂಥ ಕಾಲದಲ್ಲಿ ಅವರ ಮಗ ಹಿಂದಿನ ರಾತ್ರಿ ನಡೆದಂಥ ಬೆಳವಣಿಗೆಯನ್ನು ನನ್ನ ಗಮನಕ್ಕೆ ತಂದ. ಹಿಂದಿನ ರಾತ್ರಿ ಅವರು ಆಸ್ಪತ್ರೆಗೆ ಹೋಗುವುದಕ್ಕೆ ಮುನ್ನ ಮಗನನ್ನು ಕರೆದು ತಮ್ಮಲ್ಲಿ ಇದ್ದಂಥ ಸಿಗರೇಟ್ ಪ್ಯಾಕ್‌ನ್ನು ಮಗನ ಕಡೆಗೆ ಎಸೆದು ಹತ್ತಿಸಿಕೊಡು ಎಂದು ಹೇಳಿದರಂತೆ. ಅವನು ಹತ್ತಿಸಿ ಕೊಟ್ಟ ನಂತರ ಒಂದು ದಂ ಎಳೆದರು. ಆ ನಂತರ ಆಸ್ಪತ್ರೆಗೆ ಅವರನ್ನು ಕರೆದುಕೊಂಡು ಹೋಗಬೇಕಾಯಿತು. ಅತ್ಯಂತ ಪಾರದರ್ಶಕವಾದಂಥ ವ್ಯಕ್ತಿತ್ವವನ್ನು ಯಾವುದಾದರೂ ರಾಜಕಾರಣಿ ನಮ್ಮ ಸಮಾನಾಂತರವಾದ ರಾಜಕೀಯ ಜೀವನದಲ್ಲಿ ನಾವು ನೋಡುವುದಿದ್ದರೆ, ನೋಡಬಹುದಾದರೆ ಅದು ಶ್ರೀ ಸೇಠ್‌ರವರ ಒಂದು ಕಥೆ, ಸೇಠ್ ಅವರ ಜೀವನ ಚರಿತ್ರೆ, ಆ ಜೀವನದಲ್ಲಿಯ ಹಲವಾರು ಪ್ರಸಂಗಗಳು ನಮ್ಮಲ್ಲಿ ಉಂಟಾಗುತ್ತದೆ. ಶ್ರೀ ಸೇಠ್ ಅವರು ಶ್ರಮಜೀವಿ ವರ್ಗದ ಚಿಂತಕರಾಗಿದ್ದರು, ಮತ್ತು ಹಲಾವರು ಸಮಯಗಳಲ್ಲಿ ಸಮಾಜದ ಅತ್ಯಂತ ಕೆಳದರ್ಜೆಯ ನಿಕೃಷ್ಟತೆ, ನಿರ್ಲಕ್ಷ್ಯಕ್ಕೆ ಒಳಪಟ್ಟಿರತಕ್ಕಂಥ ಜನಾಂಗಗಳ ಬಗ್ಗೆ ಸರ್ಕಾರದ ಗಮನ ಸೆಳೆಯಲಿಕ್ಕೆ ಮತ್ತು

ಸರ್ಕಾರದ ಕಾರ್ಯಕ್ರಮಗಳಲ್ಲಿ ಅವರನ್ನು ಕೇಂದ್ರ ಬಿಂದುವನ್ನಾಗಿ ಮುಂದುವರಿಸಲಿಕ್ಕೆ ಅವರು ಪ್ರಯತ್ನಪಟ್ಟರು. ಒಂದೆರಡು ಬಾರಿ ಅವರು ತಮ್ಮ ಸಚಿವ ಸ್ಥಾನಕ್ಕೆ ಕೂಡ ರಾಜೀನಾಮೆ ಕೊಡುವಂಥ ಪ್ರಸಂಗ ಏಕೆ ಬಂತು ಎಂದರೆ, ಅವರು ಹೊಂದಿದ್ದ ಸಾಮಾಜಿಕ ಕಾಳಜಿ ಹಾಗೂ ಅವರು ಹೊಂದಿದ್ದ ಸಾಮಾಜಿಕ ಸಿದ್ಧಾಂತಗಳಿಗೆ ತಾವು ಸೇರಿದ ಮಂತ್ರಿಮಂಡಲ ಸರಿಯಾದಂಥ ರೀತಿಯಲ್ಲಿ ಸ್ಪಂದನಶೀಲರಾಗಿಲ್ಲ ಎನ್ನುವ ಕೊರತೆಯಿಂದ ಅವರು ಸಚಿವ ಸ್ಥಾನಕ್ಕೂ ರಾಜೀನಾಮೆ ಕೊಟ್ಟಂಥ ಪ್ರಸಸಂಗಗಳನ್ನು ನಾವು ನೆನೆದುಕೊಳ್ಳಬೇಕಾಗುತ್ತದೆ. ಶ್ರೀ ಸೇಠ್ ಅವರ ನಿಧನದಿಂದ ನಮ್ಮ ಸಾಮಾಜಿಕ ಜೀವನ ಬಹಳ ಬಡವಾಗಿದೆ. ಶ್ರೀ ಸೇಠ್ ಅವರು ತಮ್ಮ 40 ವರ್ಷಗಳ ಒಂದು ಸೇವಾ ಕಾರ್ಯದಲ್ಲಿ ನಮ್ಮೆಲ್ಲರಿಗೆ ಬಹಳ ಸ್ಫೂರ್ತಿಯನ್ನು ತಂದುಕೊಡುತ್ತಿದ್ದಂಥ ಒಬ್ಬ ಹಿರಿಯ ರಾಜಕಾರಣಿ ಮತ್ತು ಶ್ರಮಜೀವಿ, ನಿರ್ಲಕ್ಷ್ಯಕ್ಕೆ ಒಳಗಾಗಿದ್ದಂಥ ವರ್ಗಗಳ ಪ್ರತಿನಿಧಿಗಳಾಗಿದ್ದರು.

ಮಾನ್ಯ ಶ್ರೀ ಜಿ.ಬಿ.ಶಂಕರ್‌ರಾವ್ ಅವರು ತೀರಿಹೋದಂಥಾದ್ದು ನಮಗೆಲ್ಲರಿಗೂ ಬಹಳ ದುಃಖವನ್ನು ಉಂಟುಮಾಡಿದೆ. ಹಿಂದೆ ಶ್ರೀ ಶಂಕರ್‌ರಾಯರು ಸಚಿವರಾಗಿದ್ದರು. ನಮ್ಮ ಪಕ್ಷದ ಅತ್ಯಂತ ಕ್ರಿಯಾಶೀಲ ಸದಸ್ಯರು ಶ್ರೀ ಜಿ.ಬಿ.ಶಂಕರ್‌ರಾವ್‌ರವರು ಆಗಿದ್ದರು. ಅವರು ನಮ್ಮ ಹಿಂದಿನ ಸರ್ಕಾರದಲ್ಲಿ ಲೋಕೋಪಯೋಗಿ ಮಂತ್ರಿಯವರ ಸಂಸದೀಯ ಕಾರ್ಯದರ್ಶಿಯಾಗಿ ಮತ್ತು 1980 ರಿಂದ 1983ರ ಅವಧಿಯಲ್ಲಿ ಶಿಕ್ಷಣ ಸಚಿವರಾಗಿದ್ದರು. ಅವರನ್ನು ನಾವು ಇಂದು ಸ್ಮರಿಸಿಕೊಳ್ಳಬೇಕಾಗಿದೆ.

ಶ್ರೀ ಕೆ.ಎಂ.ದೊರೆಸ್ವಾಮಿ ನಾಯ್ಡು ಅವರ ಬಗ್ಗೆ ಹೇಳುವುದಾದರೆ, 1972ನೇ ಇಸವಿಯಲ್ಲಿ ಇಲ್ಲಿ ಸಚಿವನಾಗಿದ್ದಂಥ ಕಾಲದಲ್ಲಿ ಶ್ರೀ ದೊರೆಸ್ವಾಮಿ ನಾಯ್ಡು ಅವರು ಬೇತಮಂಗಲ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದರು. ಅವರು ತಾಲ್ಲೂಕು ಬೋರ್ಡಿನ ಅಧ್ಯಕ್ಷರಾಗಿ 12 ವರ್ಷಗಳ ಅವಿರತವಾದಂಥ ಸೇವೆಯನ್ನು ಕೋಲಾರ ಜಿಲ್ಲೆಗೆ ಮಾಡಿದರು. ಆ ನಂತರ ಅವರು ವಿಧಾನಸಭೆಯ ಸದಸ್ಯರಾಗಿ ಇಡೀ ರಾಜ್ಯದ ಸೇವೆಯನ್ನು ಮಾಡುವುದಕ್ಕೆ ಪ್ರಯತ್ನಪಟ್ಟರು. ಹಾಗೆಯೇ ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಆರ್.ಸಿ.ಬಾಳೆಕುಂದರಗಿ ಅವರೂ ಕೂಡ ನಮ್ಮ ಜನಗಳ ಸೇವೆಯನ್ನು ಮಾಡಲಿಕ್ಕೆ ಬೈಲಹೊಂಗಲ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದಾರೆ. ಶ್ರೀ ಶೀನಾಳಿ ಚಂದ್ರಶೇಖರ್ ಅವರು ಎರಡು ಬಾರಿ ನಮ್ಮ ಪಕ್ಷದಿಂದ ಈ ಸಭೆಯ ಸದಸ್ಯರಾಗಿದ್ದರು. ಆಗೊಮ್ಮೆ ಈಗೊಮ್ಮೆ ನಮ್ಮ ಪಕ್ಷದಲ್ಲಿ ಸುದ್ದಿಯನ್ನು ಮಾಡುತ್ತಿದ್ದಂಥ ಶೀನಾಳಿ ಅವರನ್ನು ನಾವು ಯಾವಾಗಲೂ ಹಾಸ್ಯ ಮಾಡುತ್ತಿದ್ದೆವು. ಆದರೆ ಅವರು ಏನೇ ಮಾಡಿದರೂ ಕೂಡ ನಮ್ಮ ಆತ್ಮವಿಶ್ವಾಸವನ್ನು ಅದರ ಜೊತೆಗೆ ಯಾವಾಗಲೂ ಹೆಣೆಯುತ್ತಿದ್ದರು.

1.00 ಪಿಎಂ

ಮತ್ತೊಬ್ಬ ಸದಸ್ಯರಾಗಿದ್ದ ಶ್ರೀ ಎಸ್.ರಾಜಗೋಪಾಲ್‌ರವರು 1972ನೇ ಇಸವಿಯಲ್ಲಿ ನಾನು ಸಚಿವನಾಗಿದ್ದಂಥ ಕಾಲದಲ್ಲಿ ಈ ಸಭೆಯ ಸದಸ್ಯರಾಗಿದ್ದರು. ಅವರೂ ಕೂಡ ಕೆ.ಜಿ.ಎಫ್.

ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದರು.

ಡಾ|| ಮಹದೇವ ಬಣಕಾರ್‌ರವರು ಸಾಹಿತ್ಯ ಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಿದ್ದಂಥವರು. 1967ನೇ ಇಸವಿಯಲ್ಲಿ ವಿಧಾನಸಭೆಗೆ ಪ್ರಜಾ ಸಮಾಜವಾದಿ ಪಕ್ಷದ ಸದಸ್ಯರಾಗಿ ಅವರು ಆಯ್ಕೆಯಾಗಿದ್ದರು. ಅವರು ಜೊತೆಯಲ್ಲಿ ಆ ಪಕ್ಷದಲ್ಲಿ ಕೆಲಸ ಮಾಡುವ ಒಂದು ವಿಶೇಷವಾದ ಅವಕಾಶ ನನಗೆ ಸಿಕ್ಕಿತ್ತು. ಅನಂತರ, ಕನ್ನಡ ಕಾವಲು ಸಮಿತಿಯ ಸದಸ್ಯರಾಗಿ, ಕನ್ನಡ ಸರಳೀಕರಣ ಹಾಗೂ ಪತ್ರಾಗಾರ ವೀಕ್ಷಣಾ ಸಮಿತಿಯ ಸದಸ್ಯರಾಗಿ ಅನಂತರ ವಿಧಾನ ಪರಿಷತ್ತಿನ ಸದಸ್ಯರಾಗಿ ಮಾನ್ಯ ಬಣಕಾರ್‌ರವರು ಈ ರಾಷ್ಟ್ರಕ್ಕೆ, ಸಾಹಿತ್ಯ ಕ್ಷೇತ್ರಕ್ಕೆ, ಕನ್ನಡ ಭಾಷೆಗೆ ಬಹುಮುಖವಾದ ಸೇವೆಯನ್ನು ಸಲ್ಲಿಸಿದ್ದಾರೆ.

ಶ್ರೀ ಜಿ.ಬಸಪ್ಪನವರು 1947ರಲ್ಲಿ ಜವಾಬ್ದಾರಿ ಸರ್ಕಾರದ ರಚನೆಗಾಗಿ ನಡೆದ ಚಳುವಳಿಯಲ್ಲಿ ಭಾಗವಹಿಸಿದ್ದರು. ಹೊಸದುರ್ಗದಲ್ಲಿ ಪಿಎಲ್‌ಡಿ ಬ್ಯಾಂಕಿನ ಅಧ್ಯಕ್ಷರಾಗಿದ್ದರು. ಚಿತ್ರದುರ್ಗದ ಡಿಸಿಸಿ ಬ್ಯಾಂಕಿನ ಸದಸ್ಯರಾಗಿದ್ದರು. ಹಿಂದೆ 1945ರಿಂದ 1949ರವರೆಗೆ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು. 1983ರಿಂದ 1985ರವರೆಗೆ ವಿಧಾನಸಭೆಯ ಸದಸ್ಯರಾಗಿದ್ದರು.

ಶ್ರೀ ರಾಜಾ ವೆಂಕಟಪ್ಪನಾಯಕ್‌ರವರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದು, ರಾಯಚೂರು ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗುವ ಮೂಲಕ ನಮ್ಮ ರಾಜ್ಯದ ಸೇವೆಯನ್ನು ಸಲ್ಲಿಸಿದ್ದರು.

ಶ್ರೀ ಎಂ.ವಿ.ಚಂದ್ರಶೇಖರಮೂರ್ತಿಯವರು ನಮ್ಮ ಜಿಲ್ಲೆಯವರು ಮತ್ತು 1977ರಲ್ಲಿ 6ನೇ ಲೋಕಸಭೆಗೆ ಆಯ್ಕೆಯಾಗಿ ಸತತವಾಗಿ 1996ರವರೆಗೆ ಕನಕಪುರ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಅನಂತರ, 1999ನೇ ಇಸವಿಯಲ್ಲಿ ಅವರು ಲೋಕಸಭೆಗೆ ಚುನಾಯಿತರಾಗಿದ್ದರು. ಬಹುಶಃ ಇಷ್ಟು ಬಾರಿ ಲೋಕಸಭೆಗೆ ಮತ್ತೆ ಚುನಾಯಿತರಾಗುವ ವಿಶೇಷ ಗೌರವಕ್ಕೆ ಶ್ರೀ ಎಂ.ವಿ.ಚಂದ್ರಶೇಖರ ಮೂರ್ತಿಯವರು ಬಾಧ್ಯರಾಗಿದ್ದರು. ನನಗೆ ಅವರ ತಂದೆ ಶ್ರೀ ಎಂ.ವಿ.ವೆಂಕಟಪ್ಪನವರು ಬಹಳ ಬೇಕಾಗಿದ್ದವರು. ಶ್ರೀ ಎಂ.ವಿ.ಚಂದ್ರಶೇಖರಮೂರ್ತಿಯವರ ನಿಧನದಿಂದ ನಾವು ನಮ್ಮ ಪಕ್ಷದಲ್ಲಿ ಒಬ್ಬ ಕಟಿಬದ್ಧ ನಾಯಕರನ್ನು ಕಳೆದುಕೊಂಡಂತಾಗಿದೆ. ಈಗ ಅವರು ಅಕಾಲಿಕ ನಿಧನದಿಂದ ನಮ್ಮ ಸಾರ್ವಜನಿಕ ಜೀವನಕ್ಕೆ ಬಹಳ ದೊಡ್ಡ ಪೆಟ್ಟು ಬಿದ್ದಿದೆ.

ಹಾಗೆಯೇ, ದಲಿತ ಜನಾಂಗದಿಂದ ಎದ್ದುಬಂದು ನಮ್ಮ ರಾಜ್ಯದಲ್ಲಿ ಅತ್ಯಂತ ಬಹುಮುಖ ಪ್ರತಿಭೆಯನ್ನು ಪ್ರದರ್ಶನ ಮಾಡಿ, ನಮ್ಮಿಂದ ಮರೆಯಾಗಿ ಹೋಗಿದ್ದಾರೆ. ನನ್ನ ಸ್ನೇಹಿತರಾದ ಶ್ರೀ ಟಿ.ಎನ್.ನರಸಿಂಹಮೂರ್ತಿಯವರು. ಅವರು ನ್ಯಾಯವಾದಿಯಾಗಿ ವೃತ್ತಿಯನ್ನು ಪ್ರಾರಂಭಿಸಿದರು. ಆದರೆ, ವಿದ್ಯಾರ್ಥಿ ದೆಸೆಯಿಂದಲೇ ತಮ್ಮ ನಾಯಕತ್ವದ ಗುಣಗಳನ್ನು ಬೆಳೆಸಿಕೊಂಡಿದ್ದರು. ಅವರು ಸೆನೆಟ್ ಸದಸ್ಯರಾಗಿದ್ದರು, ರಾಜ್ಯ ವಯಸ್ಕರ ಶಿಕ್ಷಣ ಮಂಡಲಿ ಸದಸ್ಯರಾಗಿದ್ದರು, ವಿಧಾನ ಪರಿಷತ್ತಿಗೆ ನಾನು ಅದರ ಸದಸ್ಯನಾಗಿದ್ದ ಕಾಲದಲ್ಲಿ ಅವರು ಅದರ ಸದಸ್ಯರಾಗಿದ್ದರು, ಹಂಗಾಮಿ ಸಭಾಪತಿಗಳಾಗಿದ್ದರು, ಪರಿಷತ್ತಿನ ಉಪಸಭಾಪತಿಗಳಾಗಿದ್ದರು.

ಸಚಿವರಾಗಿ 2-3 ಭಾರಿ ಅವರು ಈ ರಾಜ್ಯದ ಸೇವೆ ಮಾಡಿದ್ದಾರೆ. ಇತ್ತೀಚೆಗೆ ನಾವು ಕರ್ನಾಟಕ ರಾಜ್ಯದ 2ನೇ ಹಣಕಾಸು ಆಯೋಗದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುವಂತೆ ಅವರಿಗೆ ಆಹ್ವಾನವನ್ನು ಕೊಟ್ಟಾಗ ಅವರು ಅದಕ್ಕೆ ಸಮ್ಮತಿಸಿ ಕಾರ್ಯ ನಿರ್ವಹಿಸುತ್ತಿದ್ದರು. ಈ ಮಧ್ಯೆ ಅವರ ಅಕಾಲಿಕ ನಿಧನದ ವಾರ್ತೆ ನಮಗೆ ಒಂದು ದೊಡ್ಡ ಸಿಡಿಲು ಬಡಿದಂತಾಗಿದೆ. ಅವರು ಅತ್ಯಂತ ಆಕರ್ಷಕವಾದಂಥ ವ್ಯಕ್ತಿತ್ವವನ್ನು ಪಡೆದಿದ್ದರು. ಯಾವ ವರ್ಗದಿಂದ ಅವರು ಮೇಲೆದ್ದು ಬಂದರೋ ಆ ವರ್ಗದ ಕೇವಲ ಶ್ರಮಿಕವಾದಂಥ ಸೇವೆಯನ್ನು ಅವರು ಮಾಡಲಿಲ್ಲ. ಎಲ್ಲಾ ಜನಾಂಗಗಳ, ಎಲ್ಲಾ ವರ್ಗಗಳ, ಎಲ್ಲಾ ಸಮುದಾಯದ ಶ್ರೇಯೋಭಿವೃದ್ಧಿಗಾಗಿ ಶ್ರೀ ಟಿ.ಎನ್.ನರಸಿಂಹಮೂರ್ತಿಯವರು ಪ್ರಯತ್ನಪಟ್ಟರು. ಮೈಸೂರಿನಲ್ಲಿ ಅವರು ವಿದ್ಯಾರ್ಥಿನಿಲಯವನ್ನು, ಹಲವು ಶಾಲಾ-ಕಾಲೇಜುಗಳನ್ನು ಸ್ಥಾಪಿಸಿ, ನಮ್ಮ ವಿದ್ಯಾಕ್ಷೇತ್ರದಲ್ಲಿರುವ ದೊಡ್ಡ ವ್ಯಾಕ್ಯೂಂ ಅನ್ನು ಭರ್ತಿ ಮಾಡಲು ಪ್ರಯತ್ನಿಸಿದರು ಎನ್ನುವುದನ್ನು ಬಹಳ ಅಭಿಮಾನದಿಂದ ನಾವು ನೆನೆಸಿಕೊಳ್ಳಬೇಕಾಗಿದೆ ಮತ್ತು ಸ್ಮರಿಸಿಕೊಳ್ಳಬೇಕಾಗಿದೆ.

ಈ ಎಲ್ಲರ ನಿಧನದಿಂದ ನಮ್ಮ ಸಾರ್ವಜನಿಕ ಜೀವನ ಬಡವಾಗಿದೆ. ಅವರಿಗೆ ನಮ್ಮ ಗೌರವವನ್ನು ಸೂಚಿಸಬೇಕಾದುದು ನಮ್ಮ ಕರ್ತವ್ಯವಾಗಿದೆ.

ಇದರ ಜೊತೆಯಲ್ಲಿ, ಕಳೆದ ವರ್ಷ ಡಿಸೆಂಬರ್ 13ರಂದು ನಮ್ಮ ರಾಷ್ಟ್ರದ ಚರಿತ್ರೆಯಲ್ಲಿಯೇ ಅತ್ಯಂತ ಕರಾಳ ದಿವಸವಾಗಿತ್ತು. ನಮ್ಮ ದೇಶದ ಪ್ರಜಾಪ್ರಭುತ್ವವನ್ನು ಪ್ರತಿನಿಧಿಸುವ ಪಾರ್ಲಿಮೆಂಟ್ ಭವನದ ಮೇಲೆ ಭಯೋತ್ಪಾದಕರು ನಡೆಸಿದ ಧಾಳಿಯಲ್ಲಿ ಅಲ್ಲಿಯ ಭದ್ರತಾ ಸಿಬ್ಬಂದಿ ಕಾರ್ಯನಿಷ್ಠೂರರಾಗಿ, ಅತ್ಯಂತ ಕ್ಷಿಪ್ರ ಕಾರ್ಯಾಚರಣೆ ಮಾಡುವ ಮೂಲಕ, ಒಬ್ಬ ಮಹಿಳೆ ಮತ್ತು ಇನ್ನೂ ಕೆಲವರು ತಮ್ಮ ಪ್ರಾಣವನ್ನು ಬಲಿಕೊಡುವ ಮೂಲಕ ನಮ್ಮ ಸಂಸತ್ ಭವನವನ್ನು, ಸಂಸತ್ ಸದಸ್ಯರನ್ನು, ಉಳಿದವರನ್ನು ಕಾಪಾಡಿದ ಕೀರ್ತಿ ಅವರಿಗೇ ಸೇರಿದೆ. ಆದುದರಿಂದ, ಆ ಭದ್ರತಾ ಸಿಬ್ಬಂದಿಗಳಿಗೆ ನಮ್ಮ ಗೌರವವನ್ನು ಸಲ್ಲಿಸುವುದು ನಮ್ಮ ಕರ್ತವ್ಯವಾಗಿದೆ.

ಮಾನ್ಯ ಸಭಾಧ್ಯಕ್ಷರೆ, ತಾವೇನು ನಿರ್ಣಯವನ್ನು ನಮ್ಮ ಮುಂದಿಟ್ಟಿದ್ದೀರಿ, ಅದನ್ನು ನಾನು ಬಹಳ ನಮ್ರತೆಯಿಂದ ಸಮರ್ಥನೆ ಮಾಡುತ್ತೇನೆ.

+ ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ಇತ್ತೀಚಿನ ದಿನಗಳಲ್ಲಿ ನಮ್ಮ ಸಾರ್ವಜನಿಕ ಜೀವನದಿಂದ ಮತ್ತು ರಾಜಕೀಯ ಜೀವನದಿಂದ ಹಲವಾರು ಪ್ರಮುಖ ವ್ಯಕ್ತಿಗಳು ನಮ್ಮನ್ನಗಲಿ ಹೋಗಿದ್ದಾರೆ. ಅವರಲ್ಲಿ ಪ್ರಮುಖರಾದವರೆಂದರೆ ಶ್ರೀ ಅಜೀಜ್ ಸೇಠ್‌ರವರೂ ಒಬ್ಬರಾಗಿದ್ದಾರೆ. ಅವರು ಕೇವಲ ಯಾವುದೇ ಒಂದು ಭಾಗಕ್ಕೆ ಸೀಮಿತವಾಗಿರಲಿಲ್ಲ. ಇಡೀ ರಾಜ್ಯದಲ್ಲಿ ಎಲ್ಲಾ ಜನರಿಗೂ ಅವರು ಚಿರಪರಿಚಿತರಾದ ವ್ಯಕ್ತಿತ್ವವನ್ನು ಹೊಂದಿದ್ದರು. ಕಾರ್ಮಿಕರ ಪರವಾಗಿ ಹೋರಾಟ ಮಾಡಿದವರು. ಅದರಲ್ಲಿಯೂ ಬೀಡಿ ಕಾರ್ಮಿಕರ ಪರವಾಗಿ ಹೋರಾಟದ ಮುಂಚೂಣಿಯಲ್ಲಿದ್ದು, ಬೀಡಿ ಕಾರ್ಮಿಕರ ನಾಯಕತ್ವವನ್ನು ತೆಗೆದುಕೊಂಡು,

ಕಾರ್ಮಿಕರ ಪರವಾಗಿ ವ್ಯಕ್ತಿತ್ವವನ್ನು ಬೆಳೆಸಿಕೊಂಡಿದ್ದವರು. ನಮ್ಮ ಧಾರವಾಡ ದಕ್ಷಿಣ ಲೋಕಸಭಾ ಕ್ಷೇತ್ರದಲ್ಲಿ ಅವರು ಸ್ಪರ್ಧಿಸಿದ್ದರು. ಅವರು ಅಲ್ಲಿಂದ ಆರಿಸಿಯೂ ಸಹ ಬಂದಿದ್ದರು. ಮೈಸೂರಿನವರು ಧಾರವಾಡದ ಕಡೆಯಿಂದ ಆರಿಸಿ ಬಂದಿದ್ದು ಅವರ ವ್ಯಕ್ತಿತ್ವವನ್ನು ತೋರಿಸುತ್ತದೆ. ಶ್ರೀ ಅಜೀಜ್ ಸೇಠ್‌ರವರು ರಾಜಕೀಯ ರಂಗದಲ್ಲಿ ತಮ್ಮ ಇಡೀ ಆಯುಷ್ಯವನ್ನು ಕಳೆದಿದ್ದಾರೆ. ಆ ಹಿರಿಯ ವ್ಯಕ್ತಿ ಇಂದು ನಮ್ಮ ಜೊತೆಯಲ್ಲಿಲ್ಲ. ಅವರ ಕುಟುಂಬಕ್ಕೆ ಆ ದುಃಖವನ್ನು ಭರಿಸುವ ಶಕ್ತಿಯನ್ನು ಕೊಡಲೆಂದು ನಾನು ಈ ಸಂದರ್ಭದಲ್ಲಿ ದೇವರಲ್ಲಿ ಕೋರುತ್ತಿದ್ದೇನೆ.

ಅದೇರೀತಿ ಹಿರೇಕೆರೂರು ಕ್ಷೇತ್ರದಿಂದ ಹಲವಾರು ಬಾರಿ ಆಯ್ಕೆಯಾಗಿ ಹಲವು ಪ್ರಮುಖ ಹುದ್ದೆಗಳನ್ನು ತೆಗೆದುಕೊಂಡು ತಮ್ಮ ಜವಾಬ್ದಾರಿಯನ್ನು ಅತ್ಯಂತ ಪ್ರಾಮಾಣಿಕತೆಯಿಂದ ಹಾಗೂ ನಿಷ್ಠೆಯಿಂದ ಮಾಡಿರತಕ್ಕಂಥ ಕೀರ್ತಿ ಶ್ರೀ ಜಿ.ಬಿ.ಶಂಕರ್‌ರಾವ್‌ರವರಿಗೆ ಸಲ್ಲುತ್ತದೆ. ಶ್ರೀಯುತರು ಶಿಕ್ಷಣ ಸಚಿವರಾಗಿ ಹಾಗೂ ಬೇರೆ ಬೇರೆ ಇಲಾಖೆಗಳಲ್ಲಿ ಕೆಲಸ ಮಾಡಿದ್ದಾರೆ. ಯಾವುದೇ ಇಲಾಖೆಯಲ್ಲಿ ಅವರು ಕೆಲಸ ಮಾಡಿದರೂ ಅದನ್ನು ಅವರು ಬಹಳ ನಿಷ್ಠೆಯಿಂದ ಕೆಲಸ ಮಾಡಿರುವುದಲ್ಲದೆ, ಸಾರ್ವಜನಿಕವಾಗಿ ಅವರನ್ನು ಗುರುತಿಸುವಂಥ ಕೆಲಸವನ್ನು ಶ್ರೀಯುತರು ಮಾಡಿದ್ದಾರೆ. ಅದರಲ್ಲೂ ಶಿಕ್ಷಣ ಸಚಿವರಾಗಿದ್ದಾಗ ಅವರು ಮಾಡಿರುವಂಥ ಕೆಲಸವನ್ನು ಇವತ್ತಿಗೂ ಇಡೀ ರಾಜ್ಯಾದ್ಯಂತ ಜನರು ನೆನಪಿಸಿಕೊಳ್ಳುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಒಬ್ಬ ಹೋರಾಟಗಾರರಾದ ಶ್ರೀ ಜಿ.ಬಿ.ಶಂಕರ್‌ರಾವ್‌ರವರು ಇವತ್ತು ನಮ್ಮ ಜೊತೆಯಲ್ಲಿ ಇಲ್ಲವೆನ್ನುವ ದುಃಖ ನಮಗಿದೆ.

ಅದೇ ರೀತಿ ಶ್ರೀ ಕೆ.ಎಂ.ದೊರೆಸ್ವಾಮಿ ನಾಯ್ಡುರವರು ಕೃಷಿಕರು ಹಾಗೂ ರೈತ ನಾಯಕರು ಆಗಿದ್ದರು. ಶ್ರೀ ಆರ್.ಸಿ.ಬಾಲಕುಂದರಗಿಯವರು ಕೋ-ಆಪರೇಟಿವ್ ಡೈರಿ ಸೊಸೈಟಿಯ ಸ್ಥಾಪಕ ಅಧ್ಯಕ್ಷರಾಗಿದ್ದರು ಹಾಗೂ ಇತರ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ಮಾಡಿದಂಥ ಅನುಭವೀಕರು, ಸಮಾಜದ ಪ್ರಮುಖ ಕೆಲಸಗಾರರಾಗಿ ಅವರು ಕೆಲಸ ಮಾಡಿರುವುದನ್ನು ನಾವು ನೋಡುತ್ತಿದ್ದೇವೆ. ಅದೇ ರೀತಿ ಶ್ರೀ ಶೀನಾಳಿ ಚಂದ್ರಶೇಖರ್‌ರವರು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿದಂಥವರು ಮತ್ತು ರಾಜಕೀಯ ನಾಯಕತ್ವವನ್ನು ಹೊಂದಿದ್ದು, ಸಾಮಾಜಿಕ ಕಳಕಳಿಯನ್ನು ಹೊಂದಿರತಕ್ಕಂಥವರು. ಶ್ರೀ ಎಸ್.ರಾಜಗೋಪಾಲ್‌ರವರು ಕಾರ್ಮಿಕ ಸಂಘಟನೆಯನ್ನು ಮಾಡಿ, ಕಾರ್ಮಿಕ ನಾಯಕರಾಗಿ ಹೋರಾಟವನ್ನು ಮಾಡಿ ವಿಶೇಷವಾದ ವ್ಯಕ್ತಿತ್ವವನ್ನು ಬೆಳೆಸಿಕೊಂಡಿದ್ದರು. ಡಾ॥ ಮಹದೇವ್ ಬಣಕಾರ್ ಅವರನ್ನು ನಾವು ರಾಜಕಾರಣಿ ಎನ್ನುವುದಕ್ಕಿಂತ ಒಬ್ಬ ಸಾಹಿತಿಯಾಗಿ ನೋಡಿದ್ದೇವೆ, ಅವರು ಇಡೀ ರಾಜ್ಯದಲ್ಲಿ ತಮ್ಮ ವ್ಯಕ್ತಿತ್ವದಿಂದ ಮೆರಗಿದಂತಹವರು. ಅವರನ್ನು ರಾಜಕಾರಣಿ ಎಂದು ಯಾರೂ ಕರೆಯಲಿಲ್ಲ, ಕನ್ನಡದ ಬಗ್ಗೆ ಹೋರಾಟ ಮಾಡಿದಂಥ ಮತ್ತು ಕಾವ್ಯ ನಾಟಕವನ್ನು ರಚನೆ ಮಾಡಿದಂಥ ಮತ್ತು ವಚನಗಳನ್ನು ರಚನೆ ಮಾಡಿದಂಥ ಮತ್ತು ಶಿವಶರಣರ ವಚನಗಳ ಬಗ್ಗೆ ಹೆಚ್ಚು ಅಧ್ಯಯನ ಮಾಡಿದಂಥ ವ್ಯಕ್ತಿತ್ವ ಡಾ॥ಮಹದೇವ್ ಬಣಕಾರ್ ಅವರದ್ದು. ಶ್ರೀಯುತರು ಕೇವಲ ಮಾಧ್ಯಮಿಕ ಶಾಲೆಯವರೆಗೆ ಮಾತ್ರ ವಿದ್ಯಾಭ್ಯಾಸ ಮಾಡಿದ್ದರೂ ತಮ್ಮ

ಜೀವನದ ಅನುಭವದಿಂದ ಹಲವಾರು ರೀತಿಯಲ್ಲಿ ತಮ್ಮ ಪ್ರತಿಭೆಯನ್ನು ತೋರಿ ಸಾಹಿತ್ಯಿಕ ರಂಗದಲ್ಲಿ ಹೆಚ್ಚಿನ ಸೇವೆ ಮಾಡಿ ಕನ್ನಡ ಜನತೆಗೆ ಚಿರಪರಿಚಿತರಾಗಿದ್ದರು. ಅವರ ಕೃತಿಗಳನ್ನು ಇವತ್ತಿಗೂ ನಾವು ನೆನಪು ಇಟ್ಟುಕೊಂಡು ಓದುವಂಥ ಹಲವಾರು ಕೃತಿಗಳನ್ನು ರಚಿಸಿದ್ದರು. ರಾಜ್ಯ ಸರ್ಕಾರದ ಬಹುಮಾನ ಪಡೆದಂಥ 'ಅಪರಂಜಿಯ ನಿಕಷ', 'ಹೊಸ ಹುಟ್ಟು' ಎನ್ನುವ ಕವನ ಸಂಕಲನ, ಸಣ್ಣ ಕತೆಗಳಲ್ಲಿ 'ಲೋಕದ ಕಣ್ಣು', 'ಕಲ್ಯಾಣದ ಕ್ರಾಂತಿ' ಹಾಗೂ 'ಯಾರು ಹೊಣೆ' ಎನ್ನುವಂಥ ಕಾವ್ಯ, ನಾಟಕಗಳನ್ನು ಬರೆದಂತಹವರು. ಮತ್ತೊಂದು ವಿಚಾರ ಏನೆಂದರೆ, ಅವರ ಪ್ರವಾಸ ಹಾಗೂ ಸತತವಾದ ಸಂಶೋಧನೆಯಿಂದ ಒಂದು ಬಹಳ ದೊಡ್ಡದಾದ ಬೃಹತ್ ಗ್ರಂಥವನ್ನು ಬರೆದಿದ್ದರು. 'ಆಂಗ್ಲ ಆಡಳಿತದಲ್ಲಿ ಕನ್ನಡ' ಎನ್ನುವಂಥ ಬೃಹತ್ ಗ್ರಂಥವನ್ನು ರಚಿಸಿದಂಥ ಕೀರ್ತಿ ಡಾ: ಮಹದೇವ ಬಣಕಾರ್‌ರವರಿಗೆ ಸಲ್ಲುತ್ತದೆ. ಆ ಗ್ರಂಥವನ್ನು ಓದಿದರೆ ಆಂಗ್ಲರ ಆಡಳಿತದಲ್ಲಿ ಯಾವ ರೀತಿ ಕನ್ನಡ ಇತ್ತು, ಆಗ ಕನ್ನಡಕ್ಕೆ ಯಾವ ರೀತಿ ಮಹತ್ವ ಇತ್ತು ಎನ್ನುವುದು ತಿಳಿಯುತ್ತದೆ. ನಂತರದ ದಿನಗಳಲ್ಲಿ ಇವತ್ತು ಇಂಗ್ಲೀಷ್‌ಗೆ ಮಹತ್ವ ಬಂದಿರುವುದನ್ನು ನಾವು ನೋಡುತ್ತಿದ್ದೇವೆ. ಆ ಸಮಯದಲ್ಲಿ ಕನ್ನಡಕ್ಕೆ ಬಹಳ ಮಹತ್ವ ಇತ್ತು, ಆ ಒಂದು ಸಂಪ್ರದಾಯವನ್ನು ಮುಂದುವರಿಸಿಕೊಂಡು ಬರಲಿಲ್ಲ, ಆಂಗ್ಲರು ಹೋದ ನಂತರ ಇವತ್ತು ಇಂಗ್ಲೀಷ್‌ಗೆ ಹೆಚ್ಚು ಪ್ರಾಮುಖ್ಯತೆ ಕೊಡುವುದು ಬಂದಿದೆ. ಇವತ್ತು ಕನ್ನಡವನ್ನು ಮರೆಯುವಂಥಾದ್ದು ಬಂದಿದೆ, ಆದರೆ ಡಾ॥ಮಹದೇಶ್ ಬಣಕಾರ್‌ರವರು ಕನ್ನಡದ ಬಗ್ಗೆ ಹೋರಾಟ ಮಾಡಿ ಕನ್ನಡದಲ್ಲಿಯೇ ಎಲ್ಲಾ ಆಡಳಿತ ಆಗಬೇಕು ಎಂದು ಹೋರಾಟ ಮಾಡಿರತಕ್ಕಂಥವರು. ಹೀಗಾಗಿ ಇವರು ಹೆಚ್ಚು ಸಾಹಿತಿಯಾಗಿ ಪರಿಚಯವಿದ್ದಂಥವರು. 1967ರಲ್ಲಿ ಬ್ಯಾಡಗಿ ಮತ ಕ್ಷೇತ್ರದಿಂದ ಆಯ್ಕೆಯಾಗಿದ್ದರು, ಶಾಸಕರಾಗಿ ಹಾಗೂ ಇತ್ತೀಚೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿ ಕೆಲಸ ಮಾಡಿದಂಥವರು. ಬ್ಯಾಡಗಿ ಎಂದಾಕ್ಷಣಕ್ಕೆ ನಮಗೆ ನೆನಪು ಬರುವುದು ಬ್ಯಾಡಗಿ ಮೆಣಸಿನಕಾಯಿ. ಹೀಗಾಗಿ ಬ್ಯಾಡಗಿ ಮೆಣಸಿನಕಾಯಿ ಎಷ್ಟು ಖಾರವಾಗಿರುತ್ತದೆಯೋ ಅಷ್ಟೇ ಖಾರವಾಗಿ ಡಾ॥ಮಹದೇವ ಬಣಕಾರ್‌ರವರು ವಿಧಾನಸಭೆಯಲ್ಲಿ ಮತ್ತು ವಿಧಾನ ಪರಿಷತ್ತಿನಲ್ಲಿ ತಮ್ಮ ವಿಚಾರಗಳನ್ನು ಪ್ರಸ್ತಾಪಿಸಿರುವುದನ್ನು ನಾವು ನೋಡುತ್ತಿದ್ದೇವೆ. ಅವರ ಭಾಷಣಗಳನ್ನು ತೆಗೆದು ನೋಡಿದರೆ ಬ್ಯಾಡಗಿ ಮೆಣಸಿನಕಾಯಿ ಎಷ್ಟು ಖಾರ ಇರುತ್ತದೆಯೋ ಅಷ್ಟೇ ಖಾರವಾಗಿ ಅವರು ಮಾತನಾಡಿದಂಥ ವಿಚಾರಧಾರೆಗಳಲ್ಲಿ ಪ್ರಸ್ತಾಪವಾಗಿರುವುದನ್ನು ನಾವಿಂದು ನೋಡುತ್ತಿದ್ದೇವೆ. ಶ್ರೀಯುತರು ಇಡೀ ರಾಜ್ಯದಲ್ಲಿ ತಮ್ಮ ವ್ಯಕ್ತಿತ್ವವನ್ನು, ಮೆರಗನ್ನು ಕೊಟ್ಟಿದ್ದಾರೆ, ಇಂಥವರು ಇವತ್ತು ನಮ್ಮ ಜೊತೆಯಲ್ಲಿ ಇರಬೇಕಾಗಿತ್ತು. ಶ್ರೀಯುತರ ಅಗಲಿಕೆಯಿಂದ ಇವತ್ತು ಸಾಹಿತ್ಯರಂಗ ಮತ್ತು ಸಾರ್ವಜನಿಕ ರಂಗ ಬಡವಾಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಲಿಚ್ಛಿಸುತ್ತೇನೆ. ಅದೇರೀತಿ ಶ್ರೀ ಜಿ.ಬಸಪ್ಪನವರು ಸಹಕಾರಿ ರಂಗದಲ್ಲಿ ಕೆಲಸ ಮಾಡಿರುವಂಥವರು, ಶ್ರೀ ರಾಜಾ ವೆಂಕಟಪ್ಪ ನಾಯಕ್‌ರವರು ಹಿಂದುಳಿದ ವರ್ಗಗಳ ನಾಯಕರಾಗಿ ಹೆಚ್ಚು ಶಿಕ್ಷಣವನ್ನು ಪಡೆದು ಸ್ವಾತಂತ್ರ ಹೋರಾಟದಲ್ಲಿ ಭಾಗವಹಿಸಿ ಹೈದರಾಬಾದ್-ಕರ್ನಾಟಕ ವಿಮೋಚನೆಯಲ್ಲಿ ಭಾಗವಹಿಸಿ ಆ ಭಾಗದ ಜನರ ಪ್ರೀತಿಗೆ ಪಾತ್ರರಾಗಿದ್ದರು. ಇತ್ತೀಚೆಗೆ ನಿಧನರಾದ ಶ್ರೀ ಎಂ.ವಿ.ಚಂದ್ರಶೇಖರಮೂರ್ತಿಯವರು ಹಿರಿಯ ಪ್ರಮುಖ ವ್ಯಕ್ತಿಯಾಗಿದ್ದರು, ಸತತವಾಗಿ ಲೋಕಸಭೆಗೆ ಆಯ್ಕೆಯಾಗುವುದರ ಮೂಲಕ

ಸಾರ್ವಜನಿಕ ಕೆಲಸ ಮಾಡಿದಂಥವರು, ರಾಜಕಾರಣದಲ್ಲಿ ಸೌಜನ್ಯ ಹಾಗೂ ಸೌಮ್ಯತೆಯನ್ನು ಮೆರೆದಂತಹ ವ್ಯಕ್ತಿ, ಜನರ ಪ್ರೀತಿ, ವಿಶ್ವಾಸವನ್ನು ಸಾಕಷ್ಟು ಗಳಿಸಿಕೊಂಡಿದ್ದರು. ಅದೇ ರೀತಿ ಅತ್ಯಂತ ಎತ್ತರದ ವ್ಯಕ್ತಿತ್ವವುಳ್ಳ ಮಾನ್ಯ ಟಿ.ಎನ್.ನರಸಿಂಹಮೂರ್ತಿಯವರು ಪಾರದರ್ಶಕ ಹಾಗೂ ಕ್ರಿಯಾಶೀಲ ವ್ಯಕ್ತಿತ್ವವನ್ನು ಗಳಿಸಿಕೊಂಡಿದ್ದರು. ಇವತ್ತು ಅವರು ನಮ್ಮ ಜೊತೆಯಲ್ಲಿ ಇಲ್ಲವೆಂದು ನೆನಪು ಮಾಡಿಕೊಳ್ಳಲಿಕ್ಕೆ ಆಗುತ್ತಿಲ್ಲ. ಏಕೆಂದರೆ, ನಾನು ಹಲವಾರು ಕಾರ್ಯಕ್ರಮಗಳಲ್ಲಿ ಅವರ ಜೊತೆಯಲ್ಲಿ ಭಾಗವಹಿಸಿದ್ದೇನೆ, ನಾನು ಪ್ರತಿಪಕ್ಷದ ನಾಯಕನಾಗಿ ಸ್ಟೇಟ್‌ಮೆಂಟ್‌ನ್ನು ಕೊಟ್ಟಂಥ ಸಂದರ್ಭದಲ್ಲಿ ಅವರೂ ಕೂಡ ಆ ಹೇಳಿಕೆಗಳ ಬಗ್ಗೆ ಹಲವಾರು ಸಾರಿ ಚರ್ಚೆ ಮಾಡಿದ್ದರು. ಯಾವುದೇ ವಿಷಯವನ್ನು ಶ್ರೀಯುತರಿಗೆ ಕೊಟ್ಟರೆ ಅದರ ಬಗ್ಗೆ ಕೂಲಂಕಷವಾಗಿ ಚರ್ಚೆ ಮಾಡುವಂಥ ವ್ಯಕ್ತಿತ್ವ ಅವರಿಗಿತ್ತು. ಹೀಗಾಗಿ ಶ್ರೀಯುತರು ಇವತ್ತು ನಮ್ಮ ಜೊತೆಗೆ ಇಲ್ಲವೆಂದರೆ ಅದನ್ನು ನೆನೆಸಿಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ಈ ಕೊರಗು ನಮಗೆ ಬಹಳ ಇದೆ, ಅದಕ್ಕಾಗಿ ಅಗಲಿದ ಎಲ್ಲಾ ಗಣ್ಯರ ಕುಟುಂಬಕ್ಕೆ ದೇವರು ಧೈರ್ಯ ಕೊಡಲಿ, ಶ್ರೀಯುತರುಗಳ ಅಗಲಿಕೆಯಿಂದ ಸಮಾಜ ಹಾಗೂ ಸಾರ್ವಜನಿಕರ ರಂಗ ಬಡವಾಗಿದ್ದು, ಇವರುಗಳ ಅಗಲಿಕೆಯ ದುಃಖವನ್ನು ತಾಳಿಕೊಳ್ಳುವಂಥ ಶಕ್ತಿ ಬರಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಇದರ ಜೊತೆಗೆ ಈ ಭದ್ರತಾ ಸಿಬ್ಬಂದಿ, ಡಿಸೆಂಬರ್-13ನೇ ತಾರೀಖು ನಮ್ಮ ರಾಷ್ಟ್ರದ ಪ್ರಜಾಪ್ರಭುತ್ವದ ಹೃದಯ ದೇಗುಲದಂತಿರುವ ಪಾರ್ಲಿಮೆಂಟನ್ನು ಭೇದಿಸುವಂತಹ, ಅದರ ಮೇಲೆ ಅಟ್ಯಾಕ್ ಮಾಡುವಂತಹ ಹೀನ ಕೆಲಸ ಆ ದಿನ ನಡೆಯಿತು, ಪ್ರಜಾತಂತ್ರ ವ್ಯವಸ್ಥೆಯನ್ನೇ ಹಾಳುಗೆಡುವಂಥ ಕೆಲಸವನ್ನು ಭಯೋತ್ಪಾದಕರು ಅಂದು ಮಾಡಿದರು. ಬಹುಶಃ ಅಂದು ಆ ಭಯೋತ್ಪಾದಕರು ಭದ್ರತಾ ಸಿಬ್ಬಂದಿಯ ಮೇಲೆ ದಾಳಿ ಮಾಡಿ ಅವರನ್ನೂ ಧಾಟಿ ಪಾರ್ಲಿಮೆಂಟಿನ ಭವನದ ಒಳಗಡೆ ಹೋಗಿದ್ದರೆ ಪರಿಸ್ಥಿತಿ ಯಾವ ಮಟ್ಟಕ್ಕೆ ಹೋಗುತ್ತಿತ್ತು ಎನ್ನುವುದನ್ನು ನೆನೆಸಿಕೊಂಡರೆ ಭಾರತದ ಪ್ರಜಾತಂತ್ರದ ವ್ಯವಸ್ಥೆಯ ಅಳಿವು ಉಳಿವು ಏನಾಗುತ್ತಿತ್ತು ಎನ್ನುವ ಪ್ರಶ್ನೆ ಬರುತ್ತದೆ. ಅಂದು ಅಲ್ಲಿನ ಭದ್ರತಾ ಸಿಬ್ಬಂದಿ ತಮ್ಮ ಜೀವದ ಹಂಗು ತೊರೆದು ಆ ಉಗ್ರಗಾಮಿ ಭಯೋತ್ಪಾದಕರ ಮೇಲೆ ಧಾಳಿಯನ್ನು ಮಾಡಿ ತಕ್ಷಣವೇ ಅವರ ಮೇಲೆ ಗುಂಡು ಹಾಕಿ ಕೊಂದಿರುವುದನ್ನು ನೋಡಿದರೆ ನಿಜವಾಗಿ ನಾವು ಆ ಭದ್ರತಾ ಸಿಬ್ಬಂದಿಯವರ ಧೈರ್ಯವನ್ನು ಮೆಚ್ಚಬೇಕಾಗುತ್ತದೆ. ಈ ಸಂದರ್ಭದಲ್ಲಿ ನಾವು ಒಂದು ವಿಚಾರವನ್ನು ನೆನಪಿಸಿಕೊಳ್ಳಬೇಕಾಗುತ್ತದೆ, ಏಕೆಂದರೆ, ಅಂದು ಆ ಭಯೋತ್ಪಾದಕರು ಪ್ರವೇಶ ಮಾಡಿದ ಸಮಯ 11-40, ಮುಂದೆ 11-41ರ ಸುಮಾರು ಒಬ್ಬ ಭದ್ರತಾ ಸಿಬ್ಬಂದಿ ವ್ಯಕ್ತಿಯ ಹತ್ತಿರ ಯಾವುದೇ ಅಸ್ತ್ರಗಳಿರಲಿಲ್ಲ, ಅವನು ಭಯೋತ್ಪಾದಕ ಒಳಗಡೆ ಪ್ರವೇಶ ಮಾಡುತ್ತಾನೆಂದು ತಿಳಿದುಕೊಂಡು ಅವನನ್ನು ತಡೆಹಿಡಿಯುವುದಕ್ಕೆ ಪ್ರಯತ್ನ ಮಾಡಿದ. ಆದರೆ ಉಗ್ರಗಾಮಿಗಳ ಗುಂಡಿಗೆ ಆತ ಬಲಿಯಾದ, ಆದರೆ ಆ ಭದ್ರತಾ ಸಿಬ್ಬಂದಿ ತನ್ನ ಜೀವ ಹೋಗುವಂಥ ಸಂದರ್ಭದಲ್ಲಿ ತನ್ನಲ್ಲಿರುವ ವೈರ್‌ಲೆಸ್ ಮೂಲಕ ಬೇರೆ ಇತರೆ ಸಿಬ್ಬಂದಿಗಳಿಗೆ ವಾರ್ನಿಂಗ್ ಕೊಟ್ಟಿದ್ದಾನೆ. ಭಯೋತ್ಪಾದಕರು ಬಂದಿದ್ದು ಅವರು ಒಳಗೆ ಹೋಗುತ್ತಿದ್ದಾರೆಂದು ವಾರ್ನಿಂಗ್ ಕೊಟ್ಟ ಮೇಲೆ ಇಡೀ ಭದ್ರತಾ ಸಿಬ್ಬಂದಿ ನಂತರ ಅಲರ್ಟ್ ಆಗಿದೆ. 11-41ಕ್ಕೆ ಆತ ಮೃತಪಟ್ಟಿದ್ದಾನೆ, 11-42ಕ್ಕೆ ಇಡೀ ಭದ್ರತಾ ಸಿಬ್ಬಂದಿ ಬಂದು ಆ ಭಯೋತ್ಪಾದಕರ ಮೇಲೆ ಅಟ್ಯಾಕ್

ಮಾಡಿ ಆ ಐದು ಜನ ಭಯೋತ್ಪಾದಕರನ್ನು ಕೊಂದು ಹಾಕಿದ್ದಾರೆ. ಅಂದರೆ ಕೇವಲ ಎರಡೇ ನಿಮಿಷದಲ್ಲಿ ಅಂದರೆ 11-40ಕ್ಕೆ ಭಯೋತ್ಪಾದಕರು ಪ್ರವೇಶ ಮಾಡಿದರು, 11-42ಕ್ಕೆ ಅವರ ಮೇಲೆ ಧಾಳಿಯಾದ ತಕ್ಷಣ ಅವರು ಮೃತ ಪಟ್ಟಿದ್ದಾರೆ. ಇವತ್ತಿನದಿವಸ ಭದ್ರತಾ ಸಿಬ್ಬಂದಿಯ ಸಾಹಸವನ್ನು ನಾವು ಕೊಂಡಾಡುತ್ತಾ ಅವರ ಸ್ಮರಣೆಯನ್ನು ಮಾಡಬೇಕಾಗುತ್ತದೆ. ಮೃತಪಟ್ಟ ಸಿಬ್ಬಂದಿಗೆ ಗೌರವವನ್ನು ಕೊಡುವುದರ ಜೊತೆಗೆ, ಮೊದಲು ಭಯೋತ್ಪಾದಕತೆ ಕಾಶ್ಮೀರ ರಾಜ್ಯದಲ್ಲಿ ಮಾತ್ರ ಇತ್ತು. ಆದರೆ, ಇವತ್ತಿನದಿನ ಇಡೀ ದೇಶದಲ್ಲಿಯೇ ಇದು ಪ್ರಸರಣಗೊಂಡಿರತಕ್ಕಂಥ ಪ್ರಸಂಗ ಬಂದಿರತಕ್ಕಂಥದ್ದರ ಬಗ್ಗೆ ನಾವೆಲ್ಲರೂ ಕೂಡ ಚಿಂತನೆ ಮಾಡತಕ್ಕಂಥ ಕಾಲ ಬಂದಿದೆ. ಭಯೋತ್ಪಾದನೆಗೆ ಕುಮ್ಮಕ್ಕು ಕೊಡತಕ್ಕಂಥ ದೇಶಗಳ ಮೇಲೆ ಇವತ್ತಿನದಿವಸ ನಾವೆಲ್ಲರೂ ಸೇರಿಕೊಂಡು ಹೋರಾಟ ಮಾಡಬೇಕಾಗುತ್ತದೆ. ನಮ್ಮ ದೇಶದ ಮೇಲೆ ಭಯೋತ್ಪಾದಕರು ಧಾಳಿ ಮಾಡುತ್ತಿರುವಂಥ ಸಂದರ್ಭದಲ್ಲಿ, ಯಾವುದೇ ಪಕ್ಷವಾಗಲಿ ಅಥವಾ ರಾಜಕೀಯ ಧುರೀಣರಾಗಲಿ, ಈ ಒಂದು ಭಯೋತ್ಪಾದನೆಯನ್ನು ನಿರ್ಮೂಲನೆ ಮಾಡುವುದಕ್ಕಾಗಿ ದೃಢವಾದ ನಿಷ್ಠೆಯಿಂದ ಸಮಗ್ರವಾಗಿ ಭಯೋತ್ಪಾದಕರ ಮೇಲೆ ಹೋರಾಟ ಮಾಡತಕ್ಕಂಥ ಕೆಲಸವನ್ನು ನಾವುಗಳು ಮಾಡಬೇಕಾಗುತ್ತದೆ. ಹಾಗೆಯೇ ಇವತ್ತಿನದಿವಸ ನಾವೆಲ್ಲರೂ ಕೂಡ ಭಯೋತ್ಪಾದನೆಯ ನಿರ್ಮೂಲಕ್ಕಾಗಿ ಪಣ ತೊಡಬೇಕಾಗಿದೆ. ಈ ದಿವಸ ಭಯೋತ್ಪಾದನೆಯನ್ನು ಖಂಡಿಸಿ ತಂದಿರತಕ್ಕಂಥ ಸದರಿ ನಿರ್ಣಯವನ್ನು ಪಾಸ್ ಮಾಡಬೇಕಾಗುತ್ತದೆ. ಹಾಗೆಯೇ ಮಾನ್ಯ ಪ್ರಧಾನಮಂತ್ರಿಗಳ ಕೈ ಬಲಪಡಿಸುವುದಕ್ಕಾಗಿ ನಾವೆಲ್ಲರೂ ಕೂಡ ಬೆಂಬಲವನ್ನು ಕೊಡಬೇಕಾಗುತ್ತದೆ. ಇವತ್ತಿನದಿವಸ ಭಯೋತ್ಪಾದಕರಿಂದ ಆಗತಕ್ಕಂಥ ನಿರಂತರ ಧಾಳಿಯನ್ನು ಖಂಡಿಸತಕ್ಕಂಥ ಕೆಲಸವಾಗಬೇಕು. ಹಾಗೆಯೇ ನಮ್ಮಲ್ಲಿರತಕ್ಕಂಥ ಭದ್ರತಾ ಸಿಬ್ಬಂದಿಗೆ ಗೌರವ ಕೊಡತಕ್ಕಂಥಾದ್ದು ಮತ್ತು ಅವರ ಶೌರ್ಯವನ್ನು ಮೆಚ್ಚತಕ್ಕಂಥ ಕೆಲಸ ಆಗಬೇಕಾಗಿದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಸನ್ಮಾನ್ಯ ಸಭಾಧ್ಯಕ್ಷರು ಇವತ್ತಿನದಿವಸ ತಂದಿರತಕ್ಕಂಥ ದುಃಖ ಸೂಚಿತ ಗೊತ್ತುವಳಿಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಪಿ.ಜಿ.ಆರ್.ಸಿಂಧ್ಯ (ಕನಕಪುರ): ಸನ್ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿರತಕ್ಕಂಥ ಸಂತಾಪ ಸೂಚನೆಗೆ ನಾನು ವಿನಮ್ರತೆಯಿಂದ ಬೆಂಬಲವನ್ನು ಸೂಚಿಸುತ್ತೇನೆ. ಈ ಸದನದ ಹಿರಿಯ ಸದಸ್ಯರಾದ ಶ್ರೀಮಾನ್ ಅಜೀಜ್ ಸೇಠ್‌ರವರ ನಿಧನ ನಮ್ಮೆಲ್ಲರಿಗೂ ಸಹ ದುಃಖವನ್ನು ತಂದಿದೆ. ಮಾನ್ಯ ಅಜೀಜ್ ಸೇಠ್‌ರವರು ಒಂದು ವಿಶೇಷವಾದಂಥ ವ್ಯಕ್ತಿತ್ವವನ್ನು ಹೊಂದಿದ್ದರು. ಅವರಿಗೆ ಹಿಡಿಸದೇ ಇರತಕ್ಕಂಥದ್ದನ್ನು ಯಾರಾದರೂ ಮಾಡಿದರೆ, ಅದನ್ನು ಅವರು ಸಹಿಸುತ್ತಿರಲಿಲ್ಲ. ಹಾಗೆಯೇ ನಮ್ಮ ರಾಷ್ಟ್ರದಲ್ಲಿ ಅದರಲ್ಲಿಯೂ ವಿಶೇಷವಾಗಿ ನಮ್ಮ ರಾಜ್ಯದಲ್ಲಿ ಮಾನ್ಯ ಅಜೀಜ್ ಸೇಠ್‌ರವರಂಥ ನಾಯಕತ್ವದ ಕೊರತೆ ನನಗಂತೂ ಇತ್ತೀಚಿನ ದಿನಗಳಲ್ಲಿ ಬಹಳ ಎದ್ದು ಕಾಣುತ್ತಿದೆ. ಕಾರಣ, ಹಿಂದೂಗಳನ್ನು ಮುಸಲ್ಮಾನ್‌ರನ್ನು ಮತ್ತು ಕ್ರಿಶ್ಚಿಯನ್‌ರನ್ನು ನಿಜವಾಗಿಯೂ ಸಹಿತ ಒಂದೇ ಭಾವನೆಯಿಂದ ನೋಡತಕ್ಕಂಥ ಅವರಲ್ಲಿದ್ದಂಥ ಒಂದು ದೃಷ್ಟಿಕೋನ ನಿಜವಾಗಿಯೂ ಕೂಡ ನಾವು ಮೆಚ್ಚತಕ್ಕಂಥದ್ದು. ಇವತ್ತಿನದಿವಸ ರಾಜಕಾರಣಕ್ಕೋಸ್ಕರ ನಾವೇನು ಒಂದು ವರ್ಗದ ಅಥವಾ

ಧರ್ಮದ ಮುಖಂಡರಾಗಿ ಹೊರಹೊಮ್ಮುವುದಕ್ಕೆ ಪ್ರಯತ್ನ ಮಾಡುತ್ತೇವೆ, ಅಂಥದ್ದಕ್ಕೆ ಹೊರತಾಗಿ ಶ್ರೀಮಾನ್ ಅಜೀಜ್ ಸೇಠ್‌ರವರು ಒಬ್ಬ ಮಹಾನ್ ನಾಯಕರಾಗಿ ಈ ರಾಜ್ಯದಲ್ಲಿ ಮೆರೆದವರು. ಹಾಗೆಯೇ ಕಾರ್ಮಿಕರಿಗೋಸ್ಕರ ಮತ್ತು ಬಡವರಿಗೋಸ್ಕರ ತಮ್ಮ ಜೀವನವನ್ನು ತೊಡಗಿಸಿಕೊಂಡಿದ್ದರು ಎನ್ನತಕ್ಕಂಥದ್ದಕ್ಕೆ ನಿದರ್ಶನ. ಅವರು ಸಾವಿನ ಸಂದರ್ಭದಲ್ಲಿ ಸೇರಿದಂಥ ಅಪಾರವಾದ ಜನಸ್ತೋಮ ಎಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಅಜೀಜ್ ಸೇಠ್‌ರವರು ನಮ್ಮ ನಾಯಕರಾಗಿದ್ದಂಥ ಶ್ರೀಮಾನ್ ಜೆ.ಎಚ್.ಪಟೇಲರ ಒಡನಾಡಿಯಾಗಿದ್ದರು. ಶ್ರೀಯುತರು ಪಿಎಸ್‌ಪಿ ಮತ್ತು ಎಸ್‌ಎಸ್‌ಪಿ ನಲ್ಲಿ ಅಧ್ಯಕ್ಷರಾಗಿದ್ದವರು. ಹಾಗೆಯೇ ಇಲ್ಲಿರತಕ್ಕಂಥ ಶ್ರೀಮಾನ್ ಕಾಗೋಡು ತಿಮ್ಮಪ್ಪನವರ ಪಕ್ಷದಲ್ಲಿದ್ದರು. ಈ ಸೋಷಿಯಲಿಸ್ಟ್‌ಗಳಿಗೆ ಒಂದು ರೆಬೆಲಿಯನ್ ಮನೋಭಾವ ಇರುತ್ತದೆ. ಪಕ್ಷ ಬಿಟ್ಟ ತಕ್ಷಣ ಅದಕ್ಕೆ ಎಕ್ಸೆಪ್ಷನ್ ಇರಬಹುದು. ಆದರೆ ಸೋಷಿಯಲಿಸ್ಟ್‌ಗೆ ಸ್ವಲ್ಪ ರೆಬೆಲಿಯನ್ ಕ್ಯಾರೆಕ್ಟರಿಸ್ಟಿಕ್ ಇದೆ. ಹಿರಿಯ ಸದಸ್ಯರಾದಂಥ ಶ್ರೀಮಾನ್ ರಂಗನಾಥ್‌ರವರಲ್ಲಿ ಅದು ಇದೆ. ಹಾಗೆಯೇ ಇದು ಮಾನ್ಯ ಅಜೀಜ್ ಸೇಠ್‌ರವರಲ್ಲಿಯೂ ಕೂಡ ಇತ್ತು. ಅದಕ್ಕೋಸ್ಕರವೇ ನಮ್ಮ ಕರ್ನಾಟಕ ರಾಜ್ಯದಲ್ಲಿ ಪ್ರಥಮ ಕಾಂಗ್ರೆಸ್ಸೇತರ ಸರ್ಕಾರ ರಚನೆಯಾದಾಗ ಮಾನ್ಯ ಅಜೀಜ್ ಸೇಠ್‌ರವರ ಪಾತ್ರವನ್ನು ನಾವು ಮರೆಯುವುದಕ್ಕೆ ಸಾಧ್ಯವಿಲ್ಲ. ಅವರು ನಮ್ಮ ಹೆಗಡೆಯವರ ನಾಯಕತ್ವದ ಸರ್ಕಾರದಲ್ಲಿ ಕಾರ್ಮಿಕ ಇಲಾಖೆ ಮತ್ತು ವಕ್ಫ್ ಇಲಾಖೆಯ ಮಂತ್ರಿಗಳಾಗಿ ಅತ್ಯಂತ ಪ್ರೀತಿ ವಿಶ್ವಾಸದಿಂದ ಕೆಲಸ ಮಾಡಿದ್ದಾರೆ. ಆದರೆ, ಇವತ್ತಿನದಿವಸ ಇರತಕ್ಕಂಥ ನಾಯಕರಲ್ಲಿ ಒಂದು ದೊಡ್ಡ ಕೊರತೆ ಇದೆ. ಎಲ್ಲರನ್ನೂ ಸಹಿತ ಸಮಾನ ದೃಷ್ಟಿಯಿಂದ ನೋಡತಕ್ಕಂಥ ಮತ್ತು ಪ್ರೀತಿ ವಿಶ್ವಾಸದಿಂದ ನೋಡತಕ್ಕಂಥ ಪ್ರವೃತ್ತಿ ಬಹಳ ಕಡಿಮೆ ಇದೆ. ಆದರೆ ಮಾನ್ಯ ಅಜೀಜ್ ಸೇಠ್‌ರವರಲ್ಲಿ ಈ ಎಲ್ಲಾ ಒಳ್ಳೆಯ ಲಕ್ಷಣಗಳನ್ನು ನಾವು ಕಂಡಿದ್ದೇವೆ. ನನಗೆ ಯಾವತ್ತೂ ಕೂಡ ಮರೆಯುವುದಕ್ಕೆ ಆಗದೇ ಇರತಕ್ಕಂಥ ಒಂದು ವಿಷಯವನ್ನು ನಾನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿ ಆಗಿದ್ದಂಥ ಸಂದರ್ಭದಲ್ಲಿ ನಾನು ಆರೋಗ್ಯ ಇಲಾಖೆಯ ಮಂತ್ರಿಯಾಗಿದ್ದೆ. ಸುತ್ತೂರಿನ ಶಿಕ್ಷಣ ಸಂಸ್ಥೆಗೆ ಮತ್ತು ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಗೆ ಹಾಗೂ ಬಿಜಾಪುರದಲ್ಲಿರತಕ್ಕಂಥ ಮುಸಲ್ಮಾನರ ಶಿಕ್ಷಣ ಸಂಸ್ಥೆಗೆ ವೈದ್ಯಕೀಯ ಕಾಲೇಜನ್ನು ಕೊಡತಕ್ಕಂಥದ್ದಕ್ಕೆ ಸಚಿವ ಸಂಪುಟದಲ್ಲಿ ನಿರ್ಣಯವನ್ನು ತೆಗೆದುಕೊಳ್ಳಲಾಗಿತ್ತು. ಆ ಸಂದರ್ಭದಲ್ಲಿ ಅವರ ಮಗಳು ತೀರಿಕೊಂಡಿದ್ದರು. ಇಂಥ ಒಂದು ಸನ್ನಿವೇಶದಲ್ಲಿಯೂ ಕೂಡ ಮಾನ್ಯ ಅಜೀಜ್‌ಸೇಠ್‌ರವರು ಅದನ್ನು ಮರೆತು ಹಾಗೆಯೇ ಮಗಳನ್ನು ಕಳೆದುಕೊಂಡಂಥ ದುಃಖದಲ್ಲಿಯೂ ಸಹಿತ ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ಮತ್ತು ನನ್ನ ಮನೆಗೆ ಬಂದು ಅಭಿನಂದಿಸಿ ಹೋಗಿದ್ದಂಥ ಸನ್ನಿವೇಶವನ್ನು ನನಗೆ ಮರೆಯುವುದಕ್ಕೆ ಆಗುವುದಿಲ್ಲ. ನಮ್ಮ ಮತ್ತು ಅವರ ಕುಟುಂಬದ ಸಂಬಂಧ ಸುಮಾರು 70 ವರ್ಷಗಳಷ್ಟು ಹಳೆಯದು. ನಮ್ಮ ತಂದೆಯ ಅಣ್ಣಂದಿರು ಮೈಸೂರು ಸೈನ್ಯ ಇಲಾಖೆಯಲ್ಲಿ ಮುಖ್ಯಸ್ಥರಾಗಿದ್ದಂಥ ಸಂದರ್ಭದಲ್ಲಿ ಅವರ ಸಂಪರ್ಕ ನಮಗೆ ಬಂದಿತ್ತು. ಈ ಸದನದಲ್ಲಿ ನನ್ನನ್ನು ಏಕವಚನದಲ್ಲಿ ಮಾತನಾಡಿಸತಕ್ಕಂಥ ಹಕ್ಕು ಅವರಿಗೆ ಇತ್ತು. ಶ್ರೀಯುತರ ಅಗಲಿಕೆಯಿಂದ ವೈಯಕ್ತಿಕವಾಗಿಯೂ ಕೂಡ ನನಗೆ ತಡೆದುಕೊಳ್ಳಲಾರದಷ್ಟು ದುಃಖವಾಗಿದೆ. ಶ್ರೀಯುತರ

ಮನೋಭಾವನೆಯನ್ನು ನಾವು ಬೆಳಸಿಕೊಳ್ಳತಕ್ಕಂಥ ಆವಶ್ಯಕತೆ ಇದೆ. ಮಾನ್ಯ ಅಜೀಜ್ ಸೇಠ್‌ರವರ ಸಾವು ಲಕ್ಷಾಂತರ ಜನ ಅಭಿಮಾನಿಗಳನ್ನು ಅನಾಥಪ್ರಜ್ಞೆಯಿಂದ ಕಾಡುತ್ತಿದೆ. ಅವರ ಅಗಲಿಕೆಯಿಂದ ನಿಜವಾಗಿಯೂ ಕೂಡ ನಮಗೆಲ್ಲಾ ದುಃಖವಾಗಿದೆ ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜಿ.ಬಿ.ಶಂಕರ್‌ರಾವ್‌ರವರು ಒಬ್ಬ ನಿಷ್ಠಾವಂತ ಕಾಂಗ್ರೆಸ್ಸಿಗರಾಗಿ ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ದುಡಿದಿದ್ದಾರೆ. ಹಾಗೆಯೇ ಶಿಕ್ಷಣ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ.

ಶ್ರೀ ಕೆ.ಎಂ.ದೊರೆಸ್ವಾಮಿ ನಾಯ್ಡುರವರು ಕೋಲಾರ ಜಿಲ್ಲೆಯಲ್ಲಿ ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಗೆ ಸಾಕಷ್ಟು ಶ್ರಮ ಪಟ್ಟಿದ್ದಾರೆ. ಹಿಂದುಳಿದ ವರ್ಗದ ನಾಯಕರಾಗಿದ್ದಂಥ ಶ್ರೀಯುತರು ನಮ್ಮ ಪಕ್ಷದ ನಿಷ್ಠಾವಂತ ನಾಯಕರಾಗಿದ್ದರು.

ಶ್ರೀ ಆರ್.ಸಿ.ಬಾಳೆಕುಂದರಗಿರವರ ಬಗ್ಗೆ ನಾನು ಕೇಳಿದ್ದೇನೆ.

ಶ್ರೀ ಶೀನಾ೯ಳಿ ಚಂದ್ರಶೇಖರ್‌ರವರ ಬಗ್ಗೆ ಹೇಳುವುದಾದರೆ, ಈ ವಿಧಾನಸಭೆಗೆ ಒಂದು ವಿಶೇಷವಾದಂಥ ಕಳೆ ತುಂಬಿದಂಥ ವ್ಯಕ್ತಿತ್ವ ಅವರದ್ದು. ನಾನು ವಿದ್ಯಾರ್ಥಿಯಾಗಿದ್ದಂಥ ಸಂದರ್ಭದಲ್ಲಿ ಮಾನ್ಯ ಶೀನಾ೯ಳಿ ಚಂದ್ರಶೇಖರ್‌ರವರ ಮತ್ತು ಮಾನ್ಯ ಕಾಗೋಡು ತಿಮ್ಮಪ್ಪನವರ ಹಾಗೂ ಕೊಣಂದೂರು ಲಿಂಗಪ್ಪನವರ ಭಾಷಣವನ್ನು ಕೇಳಲಿಕ್ಕೆ ಇಲ್ಲಿಗೆ ಬರುತ್ತಿದ್ದೆ. ಶ್ರೀ ಶೀನಾ೯ಳಿ ಚಂದ್ರಶೇಖರ್‌ರವರು ಶಿವಮೊಗ್ಗ ಜಿಲ್ಲೆಗೆ ಅಷ್ಟೇ ಅಲ್ಲದೆ ನಮ್ಮ ರಾಜ್ಯದ ಸಂಸದೀಯ ವ್ಯವಸ್ಥೆಯಲ್ಲಿ ಒಳ್ಳೆಯ ಹೆಸರನ್ನು ಗಳಿಸಿದಂತಹ ನಾಯಕರಾಗಿದ್ದರು.

ಇನ್ನು ಶ್ರೀ ಎಸ್.ರಾಜಗೋಪಾಲ್‌ರವರು ಕಾರ್ಮಿಕ ಮುಖಂಡರಾಗಿ ಕೆಜಿಎಫ್‌ನಲ್ಲಿರತಕ್ಕಂಥ ಕಾರ್ಮಿಕರಿಗೋಸ್ಕರ ಸಾಕಷ್ಟು ದುಡಿದಿದ್ದಾರೆ. ಆದರೆ, ಅವರು ಕಂಡಂಥ ಕನಸು ಇವತ್ತಿನ ದಿವಸ ನನಸಾಗಲಿಲ್ಲ. ಏಕೆಂದರೆ, ಕೆಜಿಎಫ್ ಸ್ಥಿತಿ ಯಾವರೀತಿ ಇದೆ ಎನ್ನತಕ್ಕಂಥಾದ್ದು ನಮಗೆಲ್ಲರಿಗೂ ಸಹ ಗೊತ್ತಿದೆ.

ಶ್ರೀಯುತರಾದ ಡಾ||ಮಹದೇವ ಬಣಕಾರ್‌ರವರ ಬಗ್ಗೆ ವಿರೋಧಪಕ್ಷದ ನಾಯಕರಾದಂಥ ಶ್ರೀ ಜಗದೀಶ್ ಶೆಟ್ಟರ್‌ರವರು ಹೇಳಿದ ಹಾಗೆ, ಇವರು ಸಾರ್ವಜನಿಕ ಜೀವನದಲ್ಲಿ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಮಾಡಿರತಕ್ಕಂಥ ಸೇವೆ ಅಪಾರವಾದಂಥದ್ದು. ಶ್ರೀಯುತರು ವಿಧಾನಪರಿಷತ್ತಿನ ಸದಸ್ಯರಾಗಿದ್ದರೂ ಕೂಡ ಬಹಳ ಮುಖ್ಯವಾಗಿ ಮತ್ತು ಹೆಚ್ಚಾಗಿ ಅವರು ಸಾಹಿತಿಗಳು ಎನ್ನತಕ್ಕಂಥ ರೀತಿಯಲ್ಲಿ ನಾವೆಲ್ಲರೂ ಕಂಡಿದ್ದೇವೆ ಅವರು ಸಾಹಿತ್ಯ ಕ್ಷೇತ್ರದಲ್ಲಿ ಮಾಡಿರತಕ್ಕಂಥ ಸೇವೆ ಬಹಳ ದೊಡ್ಡದೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜಿ.ಬಸಪ್ಪನವರು ನಿಷ್ಠಾವಂತ ನಾಯಕರಾಗಿದ್ದರು. 1983ನೇ ಇಸವಿಯಲ್ಲಿ ಜನತಾ ಪಕ್ಷದ ಶಾಸಕರಾಗಿ ಕರ್ನಾಟಕ ರಾಜ್ಯದಲ್ಲಿ ನಮ್ಮ ಸರ್ಕಾರ ರಚನೆಯಾಗಲು ಸಹಕಾರ ಮಾಡಿದಂತಹವರು.

ಶ್ರೀ ರಾಜಾ ವೆಂಕಟಪ್ಪ ನಾಯಕ್‌ರವರು ಹಿಂದುಳಿದ ವರ್ಗ ವಾಲ್ಮೀಕಿ ಜನಾಂಗಕ್ಕೆ ಸೇರಿದ್ದು, ಸುಮಾರು 70-80 ವರ್ಷಗಳ ಹಿಂದೆಯೇ ಶ್ರೀಯುತರು ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದಲ್ಲಿ ಪದವಿ ಹಾಗೂ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಕಾನೂನು ಪದವಿಯನ್ನು ಪಡೆದಿದ್ದರು. ಶ್ರೀಯುತರು ಆ ಭಾಗದ ಅಭಿವೃದ್ಧಿಗಾಗಿ ದುಡಿದಿರತಕ್ಕಂಥಾದ್ದು ಮತ್ತು ಇವರ ಕುಟುಂಬ ವರ್ಗದವರು ಮಾಡಿರತಕ್ಕಂಥ ಸೇವೆಯನ್ನು ನಾವು ಸ್ಮರಿಸಿಕೊಳ್ಳಬೇಕಾಗುತ್ತದೆ.

ಇನ್ನು ಶ್ರೀ ಎ.ವಿ.ಚಂದ್ರಶೇಖರ್‌ಮೂರ್ತಿಯವರ ಬಗ್ಗೆ ಹೇಳುವುದಾದರೆ, 1983ನೇ ಇಸವಿಯಲ್ಲಿ ಇವರ ವಿರುದ್ಧ ಚುನಾವಣೆಗೆ ನಿಂತು ಸುಮಾರು 6000 ರಿಂದ 7000 ಮತಗಳ ಅಂತರದಿಂದ ನಾನು ಸೋತಿದ್ದೆನು. ಅವರು ಎರಡನೇ ಬಾರಿ ಲೋಕಸಭೆಗೆ ನಿಂತಿದ್ದಂಥ ಸಂದರ್ಭದಲ್ಲಿ ಬಹಳ ಹಣಾಹಣಿಯಿಂದ ಚುನಾವಣೆ ನಡೆಯುತ್ತಿತ್ತು. ಚುನಾವಣೆಯ ಫಲಿತಾಂಶ ಬಂದ ತಕ್ಷಣವೇ ಅವರು ನನ್ನ ಹತ್ತಿರ ಬಂದು, ನನ್ನ ಕೈ ಹಿಡಿದು 'ಸಿಂಧ್ಯಾರವರೆ, ನಾನು ಗೆಲ್ಲುತ್ತೇನೆ' ಎಂದು ನಿರೀಕ್ಷೆ ಮಾಡಿರಲಿಲ್ಲ, ಆದರೆ ಜನರು ನನ್ನನ್ನು ಗೆಲ್ಲಿಸಿದ್ದಾರೆ. ನಾನು ಚುನಾವಣೆ ಸಂದರ್ಭದಲ್ಲಿ ನಡೆದುಕೊಂಡಂಥ ನೀತಿಯನ್ನು ನಾನು ಮೆಚ್ಚುತ್ತೇನೆ ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದರು. ಕನಕಪುರ ಲೋಕಸಭಾ ಕ್ಷೇತ್ರ ಸಿದ್ದಗಂಗೆ ಬೆಟ್ಟದಿಂದ ಹಿಡಿದು ಬಿಳಿಗಿರಿರಂಗನ ಬೆಟ್ಟದವರೆಗೆ ಎಂ.ಎಂ.ಹಿಲ್ಸ್‌ವರೆಗೆ ಇರತಕ್ಕಂಥ ಒಂದು ದೊಡ್ಡ ಕ್ಷೇತ್ರವಾಗಿದೆ. ಇಲ್ಲಿ ಸುಮಾರು 25 ಲಕ್ಷ ಜನ ಮತದಾರರಿದ್ದಾರೆ. ಈ ಒಂದು ಕ್ಷೇತ್ರದಲ್ಲಿ ಜನಗಳ ವಿಶ್ವಾಸವನ್ನು ಗಳಿಸತಕ್ಕಂಥದ್ದು ಬಹಳ ಕಷ್ಟವಾದಂಥ ಕೆಲಸ.

1.30 ಪಿಎಂ

ಶ್ರೀ ಹೆಚ್.ಸಿ.ದಾಸಪ್ಪ ಹಾಗೂ ಶ್ರೀ ಜಾಫರ್ ಷರೀಫ್‌ರಂತಹ ನಾಯಕರುಗಳು ಈ ಕ್ಷೇತ್ರದ ಲೋಕಸಭಾ ಸದಸ್ಯರುಗಳಾಗಿದ್ದರು. ಶ್ರೀ ಚಂದ್ರಶೇಖರಮೂರ್ತಿಯವರು ಯಾವೊತ್ತೂ ಸಹಿತ ರಾಜಕಾರಣದಲ್ಲಿ ವಿರೋಧ ಪಕ್ಷದವರಿಗೆ ತೊಂದರೆಯನ್ನು ಕೊಟ್ಟಂಥ ಒಬ್ಬ ನಾಯಕರಲ್ಲ. ನಾನು ಹಾಗೂ ನಮ್ಮ ಪಕ್ಷದ ಸಹೋದ್ಯೋಗಿ ಮಿತ್ರರಾದ ಶ್ರೀ ಸೋಮಶೇಖರ್‌ರವರು, ಅವರು ಲೋಕಸಭಾ ಸದಸ್ಯರಾಗಿದ್ದಾಗ ನಾವು ವಿರೋಧ ಪಕ್ಷದ ಸದಸ್ಯರಾಗಿದ್ದವರು. ಯಾವೊತ್ತೂ ರಾಜಕೀಯವನ್ನು ಮಾಡದೆ ಸರ್ವ ವರ್ಗಗಳ, ಎಲ್ಲಾ ಜನತೆಯ ವಿಶ್ವಾಸವನ್ನು ಮಾನ್ಯ ಚಂದ್ರಶೇಖರಮೂರ್ತಿಯವರು ಗಳಿಸಿದ್ದರು. ಹಣಕಾಸಿನ ಮಂತ್ರಿಗಳಾಗಿ ಒಂದು ಪ್ರಾಮಾಣಿಕವಾದ ಜೀವನವನ್ನು ನಡೆಸಿದಂತಹ ನಾಯಕರು. ಇವತ್ತಿನ ಚುನಾವಣಾ ಪದ್ಧತಿಗಳು, ಇವತ್ತಿನ ಚುನಾವಣೆಯ ವೆಚ್ಚವನ್ನು ನೋಡಿದಾಗ ಇಂತಹ ವ್ಯವಸ್ಥೆಯಲ್ಲಿ ಚಂದ್ರಶೇಖರಮೂರ್ತಿಯವರು ಸರ್ವೈವ್ ಆಗಿದ್ದೆ ಒಂದು ಪವಾಡವೆಂದು ನಾನು ತಿಳಿದುಕೊಂಡಿದ್ದೇನೆ. ಅವರು ಇನ್ನೊಂದಿಷ್ಟು ದಿವಸ ಬದುಕಬೇಕಾಗಿತ್ತು, ದುರ್ದೈವ ಭಗವಂತ ಅವರಿಗೆ ಹೆಚ್ಚಿನ ಆಯುಷ್ಯವನ್ನು ಕೊಡಲಿಲ್ಲ. ಅವರು ಮೊದಲನೆಯ ಬಾರಿಗೆ ಕ್ಯಾನ್ಸರ್ ರೋಗಕ್ಕೆ ತುತ್ತಾಗಿದ್ದಾರೆಂದು ತಿಳಿದ ತಕ್ಷಣವೇ ನಾವೆಲ್ಲರೂ ಅವರನ್ನು ನೋಡಲಿಕ್ಕೆ ಹೋದಾಗ ಅವರು ಕಣ್ಣಲ್ಲಿ

ನೀರು ಹಾಕಿಕೊಂಡು ಅನೇಕ ವಿಚಾರಗಳನ್ನು ಹೇಳಿದರು. ಅದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಅದು ಅಷ್ಟೊಂದು ಸರಿಯಾಗಿ ಕಾಣುವುದಿಲ್ಲ. ವಿಶೇಷವಾಗಿ ಅವರ ಕುಟುಂಬವರ್ಗದವರಿಗೆ ಬಹಳ ದುಃಖವಾಗಿದೆ, ವಯೋವೃದ್ಧರಾದ ಅವರ ತಂದೆಯವರು ಇದ್ದಾರೆ, ಅವರು ವಿಧಾನಸಭೆಯ ಸದಸ್ಯರಾಗಿದ್ದರು, ಅವರ ವಿಧವೆ ಇದ್ದಾರೆ. ಚಂದ್ರಶೇಖರ ಮೂರ್ತಿಯವರ ಸಾವು ಅಕಾಲಿಕವೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಶ್ರೀ ಟಿ.ಎನ್.ನರಸಿಂಹಮೂರ್ತಿಯವರು 1969-70ರಲ್ಲಿ ಸಂಸ್ಥಾ ಕಾಂಗ್ರೆಸ್‌ನಿಂದ ವಿಧಾನಪರಿಷತ್ತಿಗೆ ಗೆದ್ದವರು, ಇದಾದನಂತರ ಅವರು ಕಾಂಗ್ರೆಸ್ ಪಕ್ಷಕ್ಕೆ ಸೇರಿದರು. ಅವರ ನಿಷ್ಠೆಯನ್ನು ನಾವು ಮೆಚ್ಚಬೇಕು. ಅವರು ವಿರೋಧಪಕ್ಷದ ನಾಯಕರಾಗಿ ಕರ್ನಾಟಕ ಉದ್ದಗಲಕ್ಕೂ ಸಹಿತ ಅದರಲ್ಲೂ ಹಿಂದುಳಿದ ವರ್ಗದಿಂದ ಬಂದು, ಅಸ್ಪೃಶ್ಯ ಸಮಾಜವೆಂದು ನಾವು ಏನು ಕರೆಯುತ್ತೇವೆ ಅಂತಹ ಸಮಾಜದಿಂದ ಅವರು ಬಂದು, ಎಲ್ಲಾ ವರ್ಗದ ಜನರ ವಿಶ್ವಾಸವನ್ನು ಗಳಿಸಿದ್ದಂಥ ಒಬ್ಬ ನಾಯಕರಾಗಿದ್ದರು. ಅವರಿಗೂ ಹಾಗೂ ಧರ್ಮಸ್ಥಳದ ಮಂಜನಾಥನಿಗೂ ಒಂದು ವಿಶೇಷವಾದ ನಂಟು ಇತ್ತು. ಶ್ರೀ ವೀರೇಂದ್ರ ಹೆಗಡೆಯವರೂ ಕೂಡ ಅವರ ಸಾವಿನ ಬಗ್ಗೆ ವಿಶೇಷವಾದ ಸಂತಾಪವನ್ನು ವ್ಯಕ್ತಮಾಡಿದರು. ಶ್ರೀ ಟಿ.ಎನ್.ನರಸಿಂಹ ಮೂರ್ತಿಯವರು ಪ್ರವಾಸೋದ್ಯಮ ಮಂತ್ರಿಗಳಾಗಿದ್ದರು ಎನ್ನುವುದಕ್ಕಿಂತ ವಿರೋಧ ಪಕ್ಷದ ನಾಯಕರಾಗಿದ್ದರು ಎನ್ನುವುದು ಕರ್ನಾಟಕದಲ್ಲಿ ಎಲ್ಲರಿಗೂ ಗೊತ್ತಿರುವಂತಹದ್ದು. ಅವರನ್ನು ಕಳೆದುಕೊಂಡಿರುವುದು ನಮ್ಮ ರಾಜ್ಯಕ್ಕೆ, ಎಲ್ಲಾ ವರ್ಗದ ಜನರಿಗೂ ಒಂದು ನಷ್ಟವೆಂದು ತಿಳಿದುಕೊಂಡಿದ್ದೇನೆ. ಇನ್ನು ಕೊನೆಯದಾಗಿ ಸಂಸತ್ ಭವನದ ಭದ್ರತಾ ಇಲಾಖೆಯ ಸಿಬ್ಬಂದಿವರ್ಗದವರು ಯಾರು ಹುತಾತ್ಮರಾಗಿದ್ದಾರೆ ಇದನ್ನು ಪ್ರಜಾಪ್ರಭುತ್ವದ ಪ್ರೇಮಿಯೂ ಸಹಿತ ಇವತ್ತು ಯೋಚನೆ ಮಾಡತಕ್ಕಂಥ ಒಂದು ಸನ್ನಿವೇಶವಾಗಿದೆ. ವಿಶೇಷವಾಗಿ ಮಂತ್ರಿಗಳಾಗಿರತಕ್ಕಂಥವರು, ಶಾಸಕರಾಗಿರ ತಕ್ಕಂಥವರು, ಲೋಕಸಭಾ ಸದಸ್ಯರಾಗಿರತಕ್ಕಂಥವರು ನಮ್ಮ ಜೀವಕ್ಕೆ ಅಪಾಯವಿದೆ ಎನ್ನುವುದನ್ನು ಅವರು ಅರಿತು ತಮ್ಮ ಕೆಲಸವನ್ನು ಮಾಡತಕ್ಕಂಥ ಒಂದು ಸನ್ನಿವೇಶ ಇವತ್ತು ಇದರಿಂದ ನಿರ್ಮಾಣವಾಗಿದೆ. ಈ ಭಯೋತ್ಪಾದನೆಯನ್ನು ನಾವು ದಮನ ಮಾಡುವುದರಲ್ಲಿ ನಾವೆಲ್ಲರೂ ಪಕ್ಷಭೇದಗಳನ್ನು ಮರೆತು ಒಂದಾಗಿದ್ದೇವೆ, ಅದು ಮೆಚ್ಚತಕ್ಕಂಥ ವಿಚಾರವೆಂದು ನಾನು ಹೇಳುತ್ತೇನೆ. ಇವತ್ತಿನ ಪ್ರಧಾನ ಮಂತ್ರಿಗಳು ಈ ಭಯೋತ್ಪಾದನೆಯ ವಿಚಾರದಲ್ಲಿ ಎಲ್ಲಾ ವಿರೋಧ ಪಕ್ಷದವರನ್ನು ಕರೆದಾಗ ಪಾರ್ಲಿಮೆಂಟಿನ ವಿರೋಧ ಪಕ್ಷದ ನಾಯಕರು, ವಿರೋಧ ಪಕ್ಷದ ಎಲ್ಲಾ ಮಿತ್ರರು ಸಹಿತ ನಾವೆಲ್ಲರೂ ಒಂದು ಎನ್ನತಕ್ಕಂಥ ಮಾತನ್ನು ಹೇಳಿದ್ದು ಅದು ಮೆಚ್ಚತಕ್ಕಂಥಾದ್ದು. ಈ ಹುತಾತ್ಮರಿಗೆ ನಾವು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳೋಣ, ಅವರು ಕುಟುಂಬವರ್ಗದವರಿಗೆ ನಮ್ಮ ಸಂತಾಪ ಸೂಚನೆಯನ್ನು ಕಳುಹಿಸಿಕೊಡುತ್ತಿದ್ದೀರಿ, ಅವರ ಕುಟುಂಬದಲ್ಲಿ ಬದುಕಿರತಕ್ಕಂಥವರಿಗೆ ಒಳ್ಳೆಯದಾಗಲಿ. ಅವರಿಗೆ ಕೆಲವೊಂದು ರಾಜ್ಯ ಸರ್ಕಾರದಿಂದ ಹಣವನ್ನು ಕೊಟ್ಟಿದ್ದಾರೆ, ಸಾಧ್ಯವಾದರೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಆ ಕಡೆ ವಿಚಾರವನ್ನು ಮಾಡಲಿ ಎಂದು ಹೇಳುತ್ತೇನೆ. ಇವತ್ತು ತಾವು ಏನು ಹೇಳಿರುತ್ತೀರಿ, ಇಂತಹ ಮಹಾನ್ ನಾಯಕರುಗಳನ್ನು ಕಳೆದುಕೊಂಡು ಕರ್ನಾಟಕ ಬಡವಾಗಿದೆ, ಇಂತಹ ಅಗಲಿದ ನಾಯಕರಿಂದ ವಿಶೇಷವಾಗಿ ನಮ್ಮ ಪೀಳಿಗೆಯವರು 40 ರಿಂದ 60 ವರ್ಷದವರೆಗೆ

ಇರುವ ಮುಖಂಡರುಗಳು ನಾವು ಈ ಜಾತ್ಯಾತೀತ ಮನೋಭಾವ, ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷದವರನ್ನು ಗೌರವಿಸತಕ್ಕಂಥ ಒಂದು ಮನೋಪ್ರವೃತ್ತಿ, ಎಲ್ಲರನ್ನೂ ಸಮಾನವಾಗಿ ನೋಡತಕ್ಕಂಥ ಒಂದು ದೃಷ್ಟಿಕೋನವನ್ನು ಬೆಳೆಸಿಕೊಂಡರೆ ಬಹಳ ಉಪಯೋಗವಾಗುತ್ತದೆ. ಅದೇ ಈ ಮಹಾನ್ ನಾಯಕರುಗಳಿಗೆ ಸೂಚಿಸತಕ್ಕಂಥ ಒಂದು ದೊಡ್ಡ ಗೌರವ ಎಂದು ತಿಳಿದುಕೊಂಡು, ಇಷ್ಟು ಮಾತನಾಡಲಿಕ್ಕೆ ತಾವು ನನಗೆ ಅವಕಾಶವನ್ನು ಕೊಟ್ಟಿರುತ್ತೀರಿ ಅದಕ್ಕಾಗಿ ತಮಗೆ ವಂದಿಸಿ, ಮತ್ತೊಮ್ಮೆ ಈ ವಂದನಾ ನಿರ್ಣಯಕ್ಕೆ ನಮ್ಮ ಸಂಯುಕ್ತ ಜನತಾದಳದ ಪರವಾಗಿ ಬೆಂಬಲವನ್ನು ಸೂಚಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಇನ್ನು ಮೂರು-ನಾಲ್ಕು ಜನರು ಮಾತನಾಡಬೇಕೆಂದು ತಮ್ಮ ಹೆಸರನ್ನು ಕಳುಹಿಸಿ ಕೊಟ್ಟಿದ್ದಾರೆ, ಮುಂದೆ ಮಾತನಾಡುವವರು ಸಂಕ್ಷಿಪ್ತವಾಗಿ ಮಾತನಾಡಿದರೆ ಅನುಕೂಲವಾಗುತ್ತದೆ. At any cost we will complete before two of the clock. ಕೆಲವೊಬ್ಬರು ತಮ್ಮ ತಮ್ಮ ಕ್ಷೇತ್ರದಿಂದ ಬಂದವರು ಎಂದು ಹೇಳುತ್ತಿದ್ದಾರೆ.

+ ಶ್ರೀ ಅರಗ ಜ್ಞಾನೇಂದ್ರ(ತೀರ್ಥಹಳ್ಳಿ):- ಮಾನ್ಯ ಅಧ್ಯಕ್ಷರೆ, ಕಳೆದ ಅಧಿವೇಶನಕ್ಕೂ ಮತ್ತು ಇವತ್ತಿನ ಅಧಿವೇಶನದ ನಡುವೆ ನಮ್ಮ ರಾಜ್ಯದ ಸುಮಾರು 11 ಜನ ನಿಧನರಾಗಿದ್ದಾರೆ. ನಮ್ಮ ರಾಜ್ಯ ಹಾಗೂ ದೇಶಕ್ಕೆ ತಮ್ಮ ಸಾರ್ವಜನಿಕ ಬದುಕಿನಿಂದ ಮತ್ತು ತಮ್ಮ ದುಡಿಮೆಯಿಂದ ಬಹು ದೊಡ್ಡ ಕೊಡುಗೆಯನ್ನು ಕೊಟ್ಟಿರತಕ್ಕಂಥ ಮಹಾನ್ ನಾಯಕರುಗಳು. ಅವರ ನಿಧನಕ್ಕೆ ತಾವು ತಂದಿರತಕ್ಕಂಥ ಸಂತಾಪ ಸೂಚಕ ನಿರ್ಣಯಕ್ಕೆ ನಾನು ಬೆಂಬಲಿಸುತ್ತಾ, ವಿಶೇಷವಾಗಿ ಅನೇಕ ಹಿರಿಯರಿದ್ದಾರೆ. ಅದರಲ್ಲಿ ಶೀನಾಳಿ ಚಂದ್ರಶೇಖರ್‌ರವರು ನನ್ನ ತೀರ್ಥಹಳ್ಳಿ ಕ್ಷೇತ್ರದವರಾಗಿದ್ದಾರೆ. ಅವರ ಸ್ವಂತ ಆದಿಮನೆ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತಹ ಆಗುಂಬೆ ಹೋಬಳಿಯ ಶೀನಾಳಿಯವರು. ಇವರದ್ದು ಮಲೆನಾಡಿನಲ್ಲಿ ಅತ್ಯಂತ ಶ್ರೀಮಂತ ಕುಟುಂಬ, ಇವತ್ತು ಅವರ ಮನೆ ಇಲ್ಲ, ವರಾಹಿ ಯೋಜನೆಯ ಪ್ರದೇಶದಲ್ಲಿ ಸುಮಾರು 150 ಅಡಿ ಆಳದ ನೀರಿನಲ್ಲಿ ಆ ಮನೆಯ ನಿವೇಶನ ಇದೆ. ಅವರು ಬಹಳ ದೊಡ್ಡ ಜಮೀನ್ದಾರರು. ಹೊಸನಗರ, ತೀರ್ಥಹಳ್ಳಿ ಮತ್ತು ಕುಂದಾಪುರ ತಾಲ್ಲೂಕುಗಳ ಸಾವಿರಾರು ಎಕರೆಯ ಜಮೀನನ್ನು ಹೊಂದಿದ್ದರು. ಸುಮಾರು ನೂರಾರು ಕುಟುಂಬಗಳು ಅವರ ಆಶ್ರಯದಲ್ಲಿ ಬದುಕಿದ್ದವು. ಅವರ ವಕ್ಕಲಾಗಿ ಗೇಣಿಯ ಜಮೀನನ್ನು ಮಾಡುತ್ತಿದ್ದರು. ತೀರ್ಥಹಳ್ಳಿಯ ಆ ಮಲೆನಾಡಿನ ಭಾಗದಲ್ಲಿ ಸಮಾಜವಾದಿ ಆಂದೋಳನ ಆವತ್ತು ಗೇಣಿ ರೈತರನ್ನು ಜಾಗ್ರತಗೊಳಿಸಿದಂಥ ಆ ವ್ಯವಸ್ಥೆಯ ಹಿನ್ನಲೆಯಲ್ಲಿ, ಭೂಸುಧಾರಣೆ ಜಾರಿಗೆ ಬಂದ ಆ ಹಿನ್ನಲೆಯಲ್ಲಿ ಆ ಕಾನೂನು ಬಹಳ ಯಶಸ್ವಿಯಾಗುವಲ್ಲಿ ಈ ಕುಟುಂಬ ಬಹಳ ದೊಡ್ಡ ಕೊಡುಗೆಯನ್ನು ಕೊಟ್ಟಿದೆ. ನಾನು ಇವತ್ತಿನ ಈ ಸಭೆಯಲ್ಲಿ ಸ್ಮರಿಸಿಕೊಳ್ಳಬೇಕಾಗುತ್ತದೆ. ಯಾವುದೇ ಒಬ್ಬ ಗೇಣಿ ರೈತನಿಗೆ ತಕರಾರು ಹಾಕದೆ, ಇಂತಹ ಗೇಣಿ ರೈತರು ನಮ್ಮ ಜಮೀನನ್ನು ಮಾಡುತ್ತಿದ್ದಾರೆ, ಅವರ ಹೆಸರಿಗೆ ಖಾತೆಯನ್ನು ಹಾಕಿ ಕೊಡಬಹುದು, ನಮ್ಮದು ಯಾವ ಅಭ್ಯಂತರವಿಲ್ಲ, ಇದಕ್ಕಾಗಿ ನಾವು ಟ್ರಿಬ್ಯುನಲ್ ಎದುರುಗಡೆ

ಬಂದು ನಿಲ್ಲುವುದಿಲ್ಲ ಪ್ರಾಮಾಣಿಕವಾಗಿ ಒಂದು ಪ್ರಮಾಣ ಪತ್ರವನ್ನು ಕೊಟ್ಟು ಬಹಳ ದೊಡ್ಡ ಒಂದು ಅವಕಾಶವನ್ನು ಮಾಡಿ ನಮ್ಮ ತಾಲ್ಲೂಕಿನ 100 ಪರ್ಸೆಂಟ್ ಭೂಸುಧಾರಣೆ ಕಾನೂನು ಜಾರಿಯಾಗಿ ಸಾಮಾನ್ಯವಾಗಿ ಆ ಜನ ಭೂಮಾಲೀಕರಾಗಲಿಕ್ಕೆ ಒಂದು ದೊಡ್ಡ ನೆರವನ್ನು ಕೊಟ್ಟಿರತಕ್ಕಂಥ ಕುಟುಂಬ ಇವರದ್ದಾಗಿತ್ತು. ವರಾಹಿ ಯೋಜನೆ ಆರಂಭವಾದಂಥ ಸಂದರ್ಭದಲ್ಲಿ ಅವರು ತಮ್ಮ ಮನೆಗಳನ್ನು ಬಿಟ್ಟು ಶಿವಮೊಗ್ಗಕ್ಕೆ ಬಂದರು. ಆ ಮನೆಯನ್ನು ನೋಡಲಿಕ್ಕೆ ಸಾವಿರಾರು ಜನರು ಹೋಗಿದ್ದರು. ಏಕೆಂದರೆ, ಆ ಮನೆ ಮೈಸೂರಿನ ಮಹಾರಾಜರ ಅರಮನೆಯ ಒಂದು ಸಂಕ್ಷಿಪ್ತ ರೂಪದಲ್ಲಿ ಅದು ಇತ್ತು. ಆ ಮನೆಗೆ ಮಹಾರಾಜರೂ ಕೂಡ ಅನೇಕಬಾರಿ ಬಂದಿದ್ದರು ಎನ್ನುವುದನ್ನು ನಾವು ಕೇಳಿದ್ದೇವೆ. ಅದೇ ರೀತಿಯಲ್ಲಿ ಆ ಮಾದರಿಯಾಗಿ ಆ ಮನೆಯನ್ನು ಕಟ್ಟಿದ್ದರು. ವರಾಹಿ ಯೋಜನಾ ಪ್ರದೇಶದಲ್ಲಿ ಅತ್ಯಂತ ಹೆಚ್ಚು ಮನೆಗೆ ಪರಿಹಾರವನ್ನು ಪಡೆದಿರುವಂಥ ಕುಟುಂಬ ಇದಾಗಿದೆ. ಅಂದರೆ ಆ ಮನೆ ಅಷ್ಟು ದೊಡ್ಡದಾಗಿತ್ತು, ಅಷ್ಟು ಭವ್ಯವಾಗಿ ಇತ್ತು, ಅಂತಹ ಮನೆ ಅವರದಾಗಿತ್ತು. ಆ ಮನೆತನದಿಂದ ಬಂದಿರತಕ್ಕಂಥ ಶೀನಾಳಿಯವರು ಎರಡು ಬಾರಿ ಹೊಸನಗರ ಕ್ಷೇತ್ರವನ್ನು ಈ ವಿಧಾನಸಭೆಯಲ್ಲಿ ಪ್ರತಿನಿಧಿಸಿದ್ದರು. ಆ ಕಾಲದಲ್ಲಿ ಅವರಿಂದ ಒಳ್ಳೆಯ ಕೆಲಸಗಳು ಆ ಹೊಸನಗರ ತಾಲ್ಲೂಕಿನಲ್ಲಿ ಆಯಿತು. ಅವರು ಸೋತ ನಂತರವೂ ಕೂಡ ಅನೇಕ ಸಂಘ ಸಂಸ್ಥೆಗಳ ಜೊತೆಯಲ್ಲಿ ಅವರು ತಮ್ಮ ಒಡನಾಟವನ್ನು ಇಟ್ಟುಕೊಂಡಿದ್ದರು. ಮಾನ್ಯ ಮುಖ್ಯಮಂತ್ರಿಗಳು ಆಗಲೇ ವಿಶೇಷವಾಗಿ ಸ್ಮರಿಸಿದ ಹಾಗೆ ನಿಷ್ಠಾವಂತ ಒಬ್ಬ ಕಾಂಗ್ರೆಸ್ಸಿಗನಿಗೆ ಒಂದು ಅವಕಾಶವನ್ನು ಕೊಡಲಿಲ್ಲ ಎನ್ನುವ ಒಂದು ಚಿಂತೆಯಿಂದ ಅನೇಕ ಸಲ ಒಂದು ಸುದ್ದಿಯನ್ನು ಮಾಡುತ್ತಿರುವುದನ್ನು ನಾವು ಕೇಳಿದ್ದೇವೆ. ಶೀನಾಳಿ ಚಂದ್ರಶೇಖರವರದ್ದು ಸಾಯುವ ಒಂದು ವಯಸ್ಸು ಅಲ್ಲ, ಅವರು ಅಷ್ಟೊಂದು ಚಟುವಟಿಕೆಯಿಂದ ಇದ್ದರು. ಇದ್ದಕ್ಕಿದ್ದಂತೆ ಅವರು ಒಂದು ಕಾಯಿಲೆಗೆ ಬಿದ್ದು ಎರಡು ತಿಂಗಳಲ್ಲಿ ನಿಧನವಾಗಿದ್ದು ನಮಗೆಲ್ಲಾ ಆಶ್ಚರ್ಯವಾಯಿತು. ವಿಧಿ ಇವತ್ತು ಅವರನ್ನು ಎಳೆದುಕೊಂಡು ಹೋಗಿದೆ. ಅವರ ಆತ್ಮಕ್ಕೆ ನಾನು ಆ ಕ್ಷೇತ್ರದ ಶಾಸಕನಾಗಿ ಶಾಸನಸಭೆಯ ಮೂಲಕ ಒಂದೆರಡು ನುಡಿನಮನಗಳನ್ನು ಹೇಳುತ್ತಿದ್ದೇನೆ. ಇನ್ನು ಡಿಸೆಂಬರ್ 13ನೇ ತಾರೀಖಿನಂದು ಸಂಸತ್ತಿನಲ್ಲಿ ನಡೆದಿರತಕ್ಕಂಥ ಒಂದು ಘಟನೆ ನಮ್ಮ ಪ್ರಜಾತಂತ್ರ ವ್ಯವಸ್ಥೆಯ ಒಂದು ಹೃದಯಭಾಗದಲ್ಲಿದ್ದು ಅದನ್ನು ನಿರ್ನಾಮ ಮಾಡತಕ್ಕಂಥ ಏನು ಒಂದು ಕೆಲಸ ನಡೆಯಿತು ಅಂದು ಅನೇಕ ಜನರು ಬಲಿದಾನಗೈದು ನಮ್ಮನ್ನು ಉಳಿಸಿದ್ದಾರೆ, ನಮ್ಮ ಆತ್ಮಗೌರವವನ್ನು ಹೆಚ್ಚಿಸಿದ್ದಾರೆ, ಆ ಸಿಬ್ಬಂದಿವರ್ಗಕ್ಕೆ ನಮ್ಮ ನಮನಗಳನ್ನು ಸಲ್ಲಿಸುತ್ತಾ, ನಮ್ಮ ವಿಧಾನಸಭೆ ಹಾಗೂ ಶಾಸಕರ ಭವನಕ್ಕೆ ಇತ್ತೀಚೆಗೆ ಸಾಕಷ್ಟು ಭದ್ರತೆಯನ್ನು ತಾವು ಹಾಗೂ ಸರ್ಕಾರದವರು ವಹಿಸಿದ್ದೀರಿ. ಇಲ್ಲಿ ಬೇಲಿಯನ್ನು ಹಾಗೂ ಸಿಬ್ಬಂದಿವರ್ಗವನ್ನು ಹೆಚ್ಚಿಸುವ ಮೂಲಕ ಹೆಚ್ಚು ಕಡಿಮೆಯಾಗುವುದನ್ನು ಅದು ತಡೆಗಟ್ಟುತ್ತದೆಂದು ನಮಗೇನೂ ಅನ್ನಿಸುವುದಿಲ್ಲ. ಈ ದೇಶದ ಪ್ರಧಾನಮಂತ್ರಿಯನ್ನು ಅವರ ಬೆಂಗಾವಲಿನವರು ಹತ್ಯೆ ಮಾಡಿದ್ದನ್ನು ನೋಡಿದಾಗ, ಎಲ್ಲಿ ಭಯೋತ್ಪಾದನೆ ಆರಂಭವಾಗುತ್ತದೆ ಅದರ ಮೂಲವನ್ನೇ ಹೊಸಕಿ ಹಾಕುವಂಥ ಒಂದು ವ್ಯವಸ್ಥೆಯನ್ನು ಇವತ್ತು ಮಾಡಬೇಕಾಗುತ್ತದೆ. ಆ ನಿಟ್ಟಿನಲ್ಲಿ ನಮ್ಮ ಸರ್ಕಾರವು ಪ್ರಾಮಾಣಿಕವಾದ ಪ್ರಯತ್ನವನ್ನು ಗೃಹ ಇಲಾಖೆಯ ಮೂಲಕ ಮಾಡಬೇಕಾಗುತ್ತದೆ. ಈ ಬಗ್ಗೆ ಪಕ್ಷ ಮತ್ತು ಪಂಗಡವನ್ನು ತೊರೆದು ಇಡೀ ದೇಶದ ಜನ

ಏಕವ್ಯಕ್ತಿಯ ರೀತಿಯಲ್ಲಿ ನಿಂತು, ಈ ಭಯೋತ್ಪಾದನೆಯ ಬಗ್ಗೆ ಪ್ರತಿಭಟನೆ ಮಾಡಬೇಕಾಗುತ್ತದೆ. ಇದನ್ನು ಖಂಡನೆ ಮಾಡಬೇಕಾಗುತ್ತದೆ, ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯಸರ್ಕಾರವು ಪ್ರಯತ್ನ ಮಾಡಬೇಕಾಗುತ್ತದೆ. ಏಕೆಂದರೆ ಬೆಂಗಳೂರು ನಗರವೂ ಸಹ ಒಳ್ಳೆಯ ಸ್ಥಿತಿಯಲ್ಲಿಲ್ಲ, ಈ ಭಾಗಕ್ಕೆ ಭಯೋತ್ಪಾದಕರು ಬರುತ್ತಿದ್ದಾರೆ, ಇಲ್ಲಿರತಕ್ಕಂತಹ ಶಾಂತಿ, ನೆಮ್ಮದಿಯೂ ಕೂಡ ಹಾಳಾಗತಕ್ಕಂತಹ ಪರಿಸ್ಥಿತಿ ಇದೆ ಎಂಬ ವರದಿಗಳೂ ಕೂಡ ಬರುತ್ತಿದೆ, ಇವು ನಮ್ಮ ಆತಂಕಕ್ಕೆ ಎಡೆ ಮಾಡಿಕೊಟ್ಟಿದೆ. ಹಾಗಾಗಿ ಈ ನಿಟ್ಟಿನಲ್ಲಿ ನಮ್ಮ ರಾಜ್ಯ ಸರ್ಕಾರವು ಪ್ರಾಮಾಣಿಕವಾಗಿ ಕ್ರಮವನ್ನು ಕೈಗೊಳ್ಳಬೇಕೆಂದು ಹೇಳುತ್ತಾ, ಮತ್ತೊಮ್ಮೆ ತಾವು ತಂದಿರತಕ್ಕಂತಹ ನಿರ್ಣಯಕ್ಕೆ ಬೆಂಬಲವನ್ನು ವ್ಯಕ್ತ ಮಾಡುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

\+ ಶ್ರೀ ಬಿ.ಹೆಚ್.ಬನ್ನಿಕೋಡ್(ಹಿರೇಕೆರೂರು): ಮಾನ್ಯ ಸಭಾಧ್ಯಕ್ಷರೆ, 11 ಜನ ಜನಪ್ರತಿನಿಧಿಗಳು ಶಾಸಕರಾಗಿ, ಸಂಸತ್‌ಸದಸ್ಯರಾಗಿ, ಮಂತ್ರಿಗಳಾಗಿ, ಈ ರಾಜ್ಯ ಹಾಗೂ ರಾಷ್ಟ್ರದ ಸೇವೆಯನ್ನು ಮಾಡಿ ಅಗಲಿದಂತಹ ಮಹನೀಯರ ಬಗ್ಗೆ ತಾವು ತಂದಂತಹ ಸಂತಾಪ ಸೂಚನೆಯನ್ನು ಬೆಂಬಲಿಸುತ್ತಾ, ಈಗಾಗಲೇ ಹಿರಿಯರು ವಿವರವಾಗಿ ಈ ಬಗ್ಗೆ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಶ್ರೀ ಅಜೀಜ್ ಸೇಠ್‌ರವರ ಬಗ್ಗೆ ಹೇಳುವುದಾದ್ರೆ, ಧಾರವಾಡ ದಕ್ಷಿಣ ಕ್ಷೇತ್ರದ ಸಂಸತ್ ಸದಸ್ಯರಾಗಿ ಚುನಾವಣೆಗೆ ನಿಂತಾಗ, ಚುನಾವಣಾ ಸಭೆಗಳಲ್ಲಿ ವಿರೋಧ ಪಕ್ಷದವರು ಬಂದು ಅವರಿಗೆ ಇಲ್ಲಸಲ್ಲದ ಪ್ರಶ್ನೆಗಳನ್ನು ಕೇಳುವಾಗ, ಅವರು 'ನೀನು ನನಗೆ ಓಟು ಹಾಕಬೇಡ' ಹೋಗು ಎಂದು ಹೇಳುತ್ತಿದ್ದರು. ಅವರು ಹೇಳುತ್ತಿದ್ದಂತಹ ಮಾತನ್ನು ಕೇಳಿ ನಮಗೆ ಆಶ್ಚರ್ಯವಾಗುತ್ತಿತ್ತು. ಚುನಾವಣೆಗೆ ನಿಂತ ಒಬ್ಬ ಅಭ್ಯರ್ಥಿ 'ನೀನು ನನಗೆ ಓಟು ಹಾಕಬೇಡ' ಎಂದು ಚುನಾವಣಾ ಸಭೆಗಳಲ್ಲಿ ಹೇಳುವುದನ್ನು ನೋಡಿದರೆ, ಅವರ ಆತ್ಮವಿಶ್ವಾಸ ರಾಜಕಾರಣದಲ್ಲಿ ಎಷ್ಟು ಇತ್ತು ಎಂಬುದನ್ನು ನಾವು ಗಮನಿಸಬೇಕಾಗುತ್ತದೆ. ಇವರು ಹೋದ ಸಭೆಗಳೆಲ್ಲೆಲ್ಲಾ ಈ ರೀತಿಯಾಗಿ ಹೇಳುತ್ತಿದ್ದಾರಲ್ಲಾ, ಇವರು ಆರಿಸಿ ಬರುವುದೇ ಇಲ್ಲ ಎಂದುಕೊಂಡಿದ್ದೆವು. ಅವರು ಏನು ಹೇಳುತ್ತಿದ್ದರೆಂದರೆ, ಇವರೆಲ್ಲರೂ ಓಟನ್ನು ಹಾಕುವವರಲ್ಲ, ಟೀಕೆ ಮಾಡಿ ನಮ್ಮನ್ನು ಅಪಪ್ರಚಾರ ಮಾಡುವುದಕ್ಕೆ ಇಲ್ಲಿಗೆ ಬಂದಿದ್ದಾರೆ, ಅದಕ್ಕಾಗಿ ನಾನು ಆ ರೀತಿಯಾಗಿ ಹೇಳುತ್ತಿದ್ದೇನೆ ಎನ್ನುತ್ತಿದ್ದರು. ರಾಜಕೀಯದಲ್ಲಿ ಜನರ ಪ್ರೀತಿ ವಿಶ್ವಾಸವನ್ನು ಗಳಿಸಿಕೊಂಡು, ಜನರ ಪ್ರೀತಿಯಿಂದ ಮೈಸೂರಿನಿಂದ ಧಾರವಾಡ ದಕ್ಷಿಣಕ್ಕೆ ಬಂದು ನಮ್ಮ ಕ್ಷೇತ್ರದ ಸಂಸತ್ ಸದಸ್ಯರಾಗಿ ಸೇವೆ ಸಲ್ಲಿಸಿದಂತಹ ಹಿರಿಯ ನಾಯಕರು ಮತ್ತು ಜಾತ್ಯಾತೀತ ವ್ಯಕ್ತಿ ಅಗಲಿದ್ದು ನಮ್ಮೆಲ್ಲರಿಗೂ ನಾಯಕತ್ವದ ಕೊರತೆ ಆಗಿದೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ. ನಮ್ಮ ಕ್ಷೇತ್ರದವರಾದ ಶ್ರೀ ಜಿ.ಬಿ.ಶಂಕರ್‌ರಾವ್, ಶ್ರೀಯುತರು ಸಂಘಟಿತ ಒಂದು ವ್ಯವಸ್ಥೆಯ ವಿರುದ್ಧ, ಬಡವರನ್ನು ದೀನದಲಿತರನ್ನು, ಅವರ ಪ್ರೀತಿ ವಿಶ್ವಾಸ ಪಡೆದುಕೊಂಡು ಅವರ ಸೇವೆಯನ್ನು ಮಾಡಿ, ಅವರ ಜೀವನಪರ್ಯಂತ ಬಡವರಿಗಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟು, ಶೋಷಿತರನ್ನು ಇವತ್ತು ಅವರು ರಕ್ಷಣೆಯನ್ನು ಮಾಡಿ ಅವರನ್ನು ಮೇಲಕ್ಕೆತ್ತುವಂತಹ ಕೆಲಸವನ್ನು ಮಾಡಿದ್ದಾರೆ. ಶ್ರೀಯುತರು ಶಾಸಕರಾಗಿ, ಮಂತ್ರಿಗಳಾಗಿ ವಿದ್ಯಾಮಂತ್ರಿಗಳಾಗಿ, ಈ ರಾಜ್ಯಕ್ಕೆ ಸೇವೆಯನ್ನು

ಸಲ್ಲಿಸಿದ್ದಾರೆ. ಅದರಲ್ಲೂ ನಮ್ಮ ಕ್ಷೇತ್ರಕ್ಕೆ, ಹಿರೇಕೆರೂರು ಕ್ಷೇತ್ರದಲ್ಲಿ ಸಾರಿಗೆ ಮತ್ತು ಸಂಪರ್ಕ, ದೂರವಾಣಿ, ವಿದ್ಯುತ್ ಇಲ್ಲದಂಥ ಕಾಲದಲ್ಲಿ ಆ ಎಲ್ಲಾ ವ್ಯವಸ್ಥೆಯನ್ನು ಒದಗಿಸುವುದಕ್ಕೆ ಆ ಕ್ಷೇತ್ರದ ಅಭಿವೃದ್ಧಿಗೆ ಸಾಕಷ್ಟು ಪ್ರಯತ್ನವನ್ನು ಮಾಡಿದ್ದಾರೆ. ನಮ್ಮ ಕ್ಷೇತ್ರಕ್ಕೆ ಅವರ ಶ್ರಮ ಮತ್ತು ಸೇವೆ ಸಾಕಷ್ಟು ಆಗಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಶ್ರೀಯುತರು ಶಿಕ್ಷಣ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಎಲ್ಲೆಲ್ಲಿ ಅವಶ್ಯಕತೆ ಇದೆ, ಅವರುಗಳು ಕೇಳದೆ ಇದ್ದರೂ ಸಹ ಅನೇಕ ಶಿಕ್ಷಣ ಸಂಸ್ಥೆಗಳನ್ನು ನಡೆಸುವವರನ್ನು ಕರೆದು ಗ್ರಾಮೀಣ ಪ್ರದೇಶಗಳಲ್ಲಿ ಪ್ರಾರಂಭ ಮಾಡಿ ಎಂದು ಹೇಳುತ್ತಿದ್ದರು. ಇದರಿಂದಾಗಿ ಗ್ರಾಮೀಣ ಜನತೆಗೆ ಒಳ್ಳೆಯದಾಗಲಿ ಎಂದು ಜನರನ್ನು ಕರೆದು ಶಿಕ್ಷಣ ಸಂಸ್ಥೆಗಳನ್ನು ಕೊಟ್ಟಂತಹ ಒಬ್ಬ ಆದರ್ಶ ವ್ಯಕ್ತಿಯಾಗಿದ್ದರು. ಇಂತಹ ವ್ಯಕ್ತಿ ಅದರಲ್ಲೂ ನಮ್ಮ ಕ್ಷೇತ್ರದಲ್ಲಿ ನಾಲ್ಕು ಸಾರಿ ಆರಿಸಿ ಬಂದು ಸುಮಾರು 20 ವರ್ಷಗಳ ಕಾಲ ಶಾಸಕರಾಗಿ, ಮಂತ್ರಿಯಾಗಿ ಸಮಾಜದ ಅಸಂಘಟಿತರನ್ನು ಸಂಘಟಿಸಿ ಅವರು ರಾಜ್ಯಕ್ಕೆ ಮಾಡಿದಂತಹ ಸೇವೆ ಅಮೋಘವಾದದ್ದು. ಅವರು ಒಂದು ಆದರ್ಶ ರಾಜಕಾರಣಿಯಾಗಿದ್ದರು, ಅಂತಹವರು ನಮ್ಮನ್ನು ಅಗಲಿದ್ದಾರೆ. ಅವರ ಅಗಲಿಕೆಯಿಂದ ಆದ ದುಃಖವನ್ನು ಸಹಿಸುವಂತಹ ಶಕ್ತಿಯನ್ನು ಅವರ ಪತ್ನಿ ಮತ್ತು ಮಕ್ಕಳಿಗೆ, ಬಂಧುಗಳಿಗೆ ದೇವರು ದಯಪಾಲಿಸಲಿ ಎಂದು ಹೇಳುತ್ತಾ ನನ್ನ ದುಃಖ ಸೂಚನೆಯನ್ನು ವ್ಯಕ್ತಪಡಿಸುತ್ತೇನೆ. ಅಗಲಿದ ಉಳಿದ ನಾಯಕರಲ್ಲಿ ಡಾ||ಮಹದೇವ ಬಣಕಾರ್‌ರವರ ಬಗ್ಗೆ ಈಗಾಗಲೇ ಹೇಳಿದ್ದಾರೆ, ಅವರು ಒಬ್ಬ ರಾಜಕಾರಣಿ ಎನ್ನುವುದಕ್ಕಿಂತ ಸಾಹಿತ್ಯದ ಬಗ್ಗೆ ಶರಣ ಸಾಹಿತ್ಯದ ಬಗ್ಗೆ ಅವರು ಕಡಿಮೆ ವಿದ್ಯೆಯನ್ನು ಓದಿದ್ದರೂ ಸಹಿತ ಅವರು ಅನುಭವದಿಂದ ಅಪಾರವಾದ ಸಾಹಿತ್ಯವನ್ನು ಕನ್ನಡದ ಅಭಿವೃದ್ಧಿಗಾಗಿ ಸೃಷ್ಟಿಸಿದಂತಹ ಒಬ್ಬ ಕವಿಯಾಗಿದ್ದರು. ರಾಜಕಾರಣದಲ್ಲಿ 1967ರಲ್ಲಿ ವಿರೋಧಪಕ್ಷದಲ್ಲಿ ಕುಳಿತುಕೊಂಡು ಆಗಿನ ಆಡಳಿತಗಾರರ ವಿರುದ್ಧ ಕಾವ್ಯಶೈಲಿಯಲ್ಲಿ ಅವರು ಮಾಡಿದಂತಹ ಟೀಕೆ, ಈ ಸದನದ ಇತಿಹಾಸದ ಪುಟಗಳಲ್ಲಿ ಅಚ್ಚಳಿಯದೆ ಉಳಿದಿದೆ. ಆಡಳಿತದಲ್ಲಿ ಸರ್ಕಾರ ಮಾಡಿದಂತಹ ಲೋಪದೋಷಗಳನ್ನು ಜನರಿಗೆ ಮನಮೆಚ್ಚುವಂತೆ ಕಾವ್ಯಶೈಲಿಯಲ್ಲಿ ಟೀಕೆಯನ್ನು ಮಾಡಿ ರಾಜ್ಯಕ್ಕೆ ಆಗತಕ್ಕಂತಹ ಅನೇಕ ಅನ್ಯಾಯಗಳನ್ನು ತಡೆಗಟ್ಟುವಲ್ಲಿ ಅವರು ವಿರೋಧಪಕ್ಷದ ಸದಸ್ಯರಾಗಿ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ಅವರು ಅಗಲಿದ್ದಾರೆ, ಇದೇ ರೀತಿಯಾಗಿ ಎಲ್ಲಾ ಮಹನೀಯರು, ಇವತ್ತು ಹಿರಿಯರು ಹೇಳಿದ ಪ್ರಕಾರ ಸಮಾಜಸೇವೆ ಮಾಡಿದಂತಹ ಪ್ರತಿನಿಧಿಗಳಲ್ಲಿದ್ದಂತಹ ಉತ್ತಮ ಗುಣಮಟ್ಟಗಳನ್ನು ಈಗಿನ ಸದಸ್ಯರು ಅಳವಡಿಸಿಕೊಳ್ಳುವ ಮೂಲಕ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಬೇಕೆಂದು ಹೇಳಿದ್ದಾರೆ. ಅದು ಅತ್ಯಂತ ಅವಶ್ಯಕವಾದುದು ಮತ್ತು ಅನುಕರಣೀಯವಾದಂತಹ ಮಾರ್ಗವೆಂದು ಹೇಳುತ್ತಾ ಇನ್ನು ಸಂಸತ್ತಿನ ಮೇಲೆ ಆದಂತಹ 13ನೇ ತಾರೀಖಿನಂದು ನಡೆದ ಘಟನೆ, ಇವತ್ತು ಹಿಂಸೆಯನ್ನು ಹಿಂಸೆಯಿಂದಲೇ ನಾವು ದಮನ ಮಾಡಲಿಕ್ಕೆ ಸಾಧ್ಯವೇ ಎನ್ನುವಂತಹ ಪ್ರಶ್ನೆ ನಮ್ಮ ಎದುರಿಗಿದೆ. ಅನಿವಾರ್ಯವಿದ್ದರೂ ಸಹಿತ, ಆ ಕ್ಷಣದಲ್ಲಿ ಮಾತ್ರ ಹಿಂಸೆಯನ್ನು ಹಿಂಸೆಯಿಂದಲೇ ನಾವು ದಮನ ಮಾಡಬಹುದು. ಪರಿಪೂರ್ಣವಾದ ಈ ಒಂದು ದಮನವಾಗಬೇಕಾದರೆ, ಮಾನಸಿಕ ಪರಿವರ್ತನೆ ಅತ್ಯಾವಶ್ಯಕವಾಗಿದೆ. ದಿವಂಗತ ಶ್ರೀಮತಿ ಇಂದಿರಾಗಾಂಧಿಯವರ ಪಕ್ಕದಲ್ಲಿದ್ದಂತಹ ಕಾಯುವವನೇ ಕೊಂದರೆ, ಯಾರಿಗೆ ಯಾರು

ರಕ್ಷಣೆಯನ್ನು ಕೊಡಲು ಸಾಧ್ಯ ಎನ್ನುವಂತಹ ಪ್ರಶ್ನೆ ಈ ಸಮಾಜಕ್ಕೆ, ಜಗತ್ತಿನೆದುರಿಗೆ ಇದೆ. ಯಾರು ಇದಕ್ಕಾಗಿ ವಿಧ್ವಂಸಕನ ಕೃತ್ಯಗಳಿಗೆ ಪ್ರಚೋದನೆಯನ್ನು ಕೊಡುತ್ತಿದ್ದಾರೆ. ಪ್ರಚೋದನಾಕಾರಿ, ದಮನಕಾರಿ, ಒಂದು ವಿಚಾರಗಳ ವಿರುದ್ಧ ಮಾನವತೆಯ ವಿಚಾರವನ್ನು ತುಂಬತಕ್ಕಂತಹ ಮೂಲಕ ನಾವೆಲ್ಲರು ಮಾನವರು, ಇಂತಹ ಭಯೋತ್ಪಾದನೆ, ದಮನ ಕೃತ್ಯಗಳಿಗೆ ಇಳಿಯಬಾರದು ಎಂದು ಹೇಳಿ ಜಗತ್ತಿನಾದ್ಯಂತ ಒಂದು ವೇದಿಕೆಯು ಇದಕ್ಕೆ ಸಿದ್ಧವಾಗಿ ಮಾನಸಿಕ ಬದಲಾವಣೆಯ ಮೂಲಕ ಈ ದಮನಗಳನ್ನು ಹತ್ತಿಕ್ಕಲು ಪ್ರಯತ್ನ ಮಾಡಬೇಕೆಂದು ಹೇಳುತ್ತಾ ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಸಭಾನಾಯಕರು ಮತ್ತು ಸದಸ್ಯರುಗಳು ಅಭಿವ್ಯಕ್ತ ಮಾಡಿರತಕ್ಕಂತಹ ಎಲ್ಲಾ ಅಭಿಪ್ರಾಯಗಳಿಗೆ ನನ್ನ ಸಹಮತವನ್ನು ಸೂಚಿಸುತ್ತಾ, ಈ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗುತ್ತದೆ. ಅದರಲ್ಲೂ ವಿಶೇಷವಾಗಿ ಶ್ರೀ ಅಜೀಜ್ ಸೇಠ್‌ರವರು ಒಂದು ಲೆಜೆಂಡರಿ, ಅದಕ್ಕೆ ಪರ್ಯಾಯವಾದಂತಹ ಕನ್ನಡ ಪದಗಳು ಸಿಕ್ಕುವುದಿಲ್ಲ. ಅವರು ರಾಜಕೀಯ ಪಕ್ಷಗಳಿಗೂ ಅತೀತವಾದ ಮನುಷ್ಯ, ಕ್ಷೇತ್ರಕ್ಕೂ ಅತೀತವಾದಂತಹ ಮನುಷ್ಯ, ಅವರು ಎಲ್ಲಿ ಚುನಾವಣೆಗೆ ನಿಲ್ಲಿಸಿದರೂ ಗೆದ್ದು ಬರುತ್ತಾರೆ. ಯಾವುದಾದರು ಪಕ್ಷದ ಲೇಬಲ್ ಅನ್ನು ಹಾಕಿದರೂ ಸಹ ಅವರು ಗೆದ್ದು ಬರುತ್ತಾರೆ. ಪುರಸಭೆಯಾದರೂ ಆಯಿತು, ಸಂಸತ್ ಆದರೂ ಆಯಿತು, ಶಾಸನ ಸಭೆಯಾದರೂ ಆಯಿತು. ಅವರು ವಿವಿಧವಾದಂತಹ ಆಕಾರಪ್ರಕಾರಗಳಲ್ಲಿ ಬೆಳೆದಂತಹ ಮನುಷ್ಯರಾಗಿದ್ದಾರೆ. ಅವರಿಗೆ ಕೆಲವೊಂದು ಚಟಗಳಿದ್ದವು, ಅವರು 80 ವರ್ಷದ ತನಕ ಬದುಕಿದ್ದರು ಎಂದರೆ, ಅದೇ ಒಂದು ಪವಾಡವೆಂದು ನನಗನ್ನಿಸುತ್ತದೆ. ಅವರು ಜೀವನವನ್ನು ತುಂಬಾ ಪ್ರೀತಿಯಿಂದ ಅನುಭವಿಸಿದರು, ಅಷ್ಟರಮಟ್ಟಿಗೆ ಅನುಭವಿಸುವುದಕ್ಕೆ ಯಾರ್ಯಾರಿಗೆ ಸಾಧ್ಯವಾಗುತ್ತದೆ ಎಂಬುದು ನನಗೆ ಗೊತ್ತಿಲ್ಲ, ಅವರಂತೂ ಅನುಭವಿಸಿದ್ದಾರೆ. ಪೆನ್ನುಗಳನ್ನು ಹಾಗೂ ಸಿಗರೇಟು ಲೈಟರ್‌ಗಳನ್ನು ಕಲೆಕ್ಟ್ ಮಾಡುವುದು ಅವರಿಗೆ ಎರಡು ದೊಡ್ಡ ದೊಡ್ಡ ಚಟಗಳಿದ್ದವು. ಯಾರ ಹತ್ತಿರ ಯಾರ ಜೇಬಿನಲ್ಲಿ ಸಿಗರೇಟ್ ಲೈಟರ್‌ಗಳು ಕಾಣಿತು ಎಂದರೆ ಸೇಠ್‌ಗೆ ಕಣ್ಣಿಗೆ ಬಿದ್ದರೆ ಅವರು ಕೈಯಿಂದ ಕಸಿದರೂ ಎಂದು ಲೆಕ್ಕ. ಅವರ ಮನೆಯಲ್ಲಿ ಸಿಗರೇಟ್‌ಲೈಟರ್ ಬಗ್ಗೆ ಷೋ ರೂಂ ಇದೆ, ಮತ್ತು ಪೆನ್ನುಗಳ ಷೋ ರೂಮು ಇದೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೂ ಮತ್ತು ಶ್ರೀ ಅಜೀಜ್‌ಸೇಠ್‌ರವರಿಗೂ ಬಹಳ ದಿವಸಗಳಿಂದ ರಾಯಭಾರ ಮಾಡುತ್ತಿದ್ದೆ. ಅವರು ಪ್ರೋಟೆಮ್ ಸ್ಪೀಕರ್ ಆಗಬೇಕಾದರೆ ಮುಖ್ಯಮಂತ್ರಿಗಳು ನನ್ನನ್ನು ಬಳಕೆ ಮಾಡಿದರು. ಅದರ ಉದ್ದೇಶ ಮತ್ತು ಅರ್ಥ ನನ್ನ ಮತ್ತು ಅವರಿಗಿದ್ದಂತಹ ಸಂಬಂಧವಾಗಿದೆ. ಅವರು ಯಾರು ಹೇಳಿದರೂ ಕೇಳುವಂತಹ ಮನುಷ್ಯರಲ್ಲ. ಆದರೂ ಸಹ ನಾನು ಹೋಗಿ ಅವರನ್ನು ಒಪ್ಪಿಸಿಕೊಂಡು ಬಂದದ್ದು, ಅವರು ತುಂಬಾ ಸಂತೋಷವನ್ನು ಪಟ್ಟರು, ಅವರು ಹೇಳಿದ್ದನ್ನೆಲ್ಲಾ ನಾವು ಒಪ್ಪಿಕೊಂಡು ಇಲ್ಲಿ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದೆವು. ಅವರು ಎಲ್ಲಾರಿಗೂ ನನ್ನ ಕೈಯಲ್ಲಿ ಆಗುವುದಿಲ್ಲಯ್ಯ ಎಷ್ಟು ಜನರಿಗೆ ಪ್ರಮಾಣವಚನ ಬೋಧಿಸಲು

ಸಾಧ್ಯವಾಗುತ್ತದೆಯೋ ಅಷ್ಟು ಜನರಿಗೆ ಕೊಡಿಸುತ್ತೇನೆ ಅಂದರೆ ನನಗೆ ಶಕ್ತಿಯಿಲ್ಲ ಎನ್ನುವ ಮಾತನ್ನು ಅವರು ಹೇಳುತ್ತಿದ್ದರು. ಜೊತೆಗೆ ಅವರನ್ನು ಮೈನಾರಿಟಿ ಕಮಿಷನ್ ಛೇರ್ಮನ್ ಮಾಡುವ ಕಾಲಕ್ಕೆ ಕೂಡ ನಾನು ಮಧ್ಯವರ್ತಿಯಾಗಿ ಕೆಲಸ ಮಾಡಿದ್ದೇನೆ. ಒಬ್ಬ ಅತ್ಯಂತ ಆತ್ಮೀಯ ಗೆಳೆಯ. ಗೆಳೆತನಕ್ಕೆ ಮತ್ತೊಂದು ಹೆಸರು ಅಜೀಜ್‌ಸೇಠ್ ಸಾಹೇಬರು. ಯಾವುದನ್ನೂ ನಿರ್ದಾಕ್ಷಿಣ್ಯವಾಗಿ ಎಲ್ಲರ ಜೊತೆಗೂ ಚರ್ಚೆ ಮಾಡತಕ್ಕದ್ದು ಹಂಚಿಕೊಳ್ಳತಕ್ಕದ್ದು ಅವರಲ್ಲಿತ್ತು. ನಮ್ಮ ಅವರ ಸಂಬಂಧ ಸುಮಾರು 30-35 ವರ್ಷಗಳಿಂದ ಇತ್ತು. ಸಮಾಜವಾದಿ ವೇದಿಕೆಯಿಂದ ಅವರ ನಮ್ಮ ಪರಿಚಯ ಮತ್ತು ಅವರ ಒಡನಾಡಿಯಾಗಿ ಬೆಳೆದ ನನಗೆ ಅವರನ್ನು ಕಳೆದುಕೊಂಡಿರತಕ್ಕದ್ದು ಒಂದು ದೊಡ್ಡ ದುಃಖ ತರತಕ್ಕ ಸಂಗತಿ.

ದಿವಂಗತ ಜಿ.ಬಿ.ಶಂಕರರಾವ್ ಅವರ ಬಗ್ಗೆ ಎಲ್ಲರೂ ಹೇಳಿದ್ದಾರೆ, ನಾನು ಹೆಚ್ಚು ಹೇಳುವುದಿಲ್ಲ. ಅವರಿಗೆ ಗುಬ್ಬಿ ಶಂಕರರಾವ್ ಎಂದು ಪ್ರಖ್ಯಾತಿಯಿತ್ತು. ಅವರು ಗುಬ್ಬಿ ಹಾಗೆ ಇದ್ದರು, ಆದರೆ ಅವರ ಪ್ರಖ್ಯಾತಿ ದೊಡ್ಡದು. ಅವರ ಶವಸಂಸ್ಕಾರ ಎಲ್ಲಿ ಮಾಡಬೇಕೆನ್ನುವುದು ದೊಡ್ಡ ವಾದವಿವಾದವಾಯಿತು. ನಾನು ಆ ದಿವಸ ಎಸ್.ಎಸ್.ಪಾಟೀಲರ ಕ್ಷೇತ್ರದಲ್ಲಿ ಪ್ರವಾಸದಲ್ಲಿದ್ದೆ. ಅವರ ಸಂಸ್ಕಾರ ಹುಟ್ಟಿದ ಊರಿನಲ್ಲಿಯೇ ಮಾಡಬೇಕೆನ್ನುವ ತೀರ್ಮಾನವಾಯಿತು. ಅಷ್ಟರಮಟ್ಟಿಗೆ ಅವರು ಒಡನಾಡಿಯಾಗಿ ದುಡಿದವರು.

ದಿವಂಗತ ಶೀರ್ನಾಳಿ ಚಂದ್ರಶೇಖರ್‌ರವರ ಬಗ್ಗೆ ಹೇಳುವುದಾದರೆ, ಅವರನ್ನು ಐದನೇ ವಿಧಾನಸಭೆಗೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಆಯ್ಕೆ ಮಾಡುವ ಸಂದರ್ಭದಲ್ಲಿ ನಾನು ಕಾಂಗ್ರೆಸ್ ಪಕ್ಷದ ವಕ್ತಾರನಾಗಿ ಹೋಗಿದ್ದಾಗಲೇ ಮೊದಲನೆಯ ಪರಿಚಯ. ಅದು ಆದ ಮೇಲೆ ಸಾಕಷ್ಟು ಸಾರಿ ಪರಿಚಯಗಳಾದವು. ಆದರೆ ಅವರಿಗೆ ವಿಧಾನಸಭೆಯ ಕಾಂಗ್ರೆಸ್ ಪಕ್ಷದ ಟಿಕೆಟ್ ಒದಗಿಸಿಕೊಡುವುದಕ್ಕೆ ಬಹಳ ತೊಂದರೆಗಳು, ಕೊರತೆಗಳು ಇದ್ದರೂ ಕೂಡ ಆ ಸಂರ್ಭದಲ್ಲಿ ನಾನು ಯಶಸ್ವಿಯಾಗಿ ಕೆಲಸ ಮಾಡಿ ಅವರು ಶಾಸನಸಭೆಗೆ ಆರಿಸಿ ಬರುವುದಕ್ಕೆ ಸಹಾಯ ಮಾಡಿದ್ದೇನೆ. ಆಮೇಲೆ ಅವರು ಬೇಕಾದಷ್ಟು ತಮ್ಮ ವರ್ಚಸ್ಸನ್ನು ಬೆಳೆಸಿಕೊಂಡರು. ಮಾನ್ಯ ಅರಗಜ್ಞಾನೇಂದ್ರರವರು ಹೇಳಿದ ಹಾಗೆ ಸುಮಾರು ಹನ್ನೆರಡು ಸಾವಿರ ಕಂದಾಯ ಕೊಡುತ್ತಿದ್ದಂಥ ಒಂದು ಕುಟುಂಬ ಅವರದ್ದು. ಸ್ವಾತಂತ್ರ ಪೂರ್ವದಲ್ಲಿ 1900ರ ಪ್ರಾರಂಭದಲ್ಲಿ ಸಾವಿರಾರು ಎಕರೆ ಜಮೀನು ಇದ್ದಂಥವರು ಅವರ ಮನೆ ವರಾಹಿ ಯೋಜನೆಯಿಂದ ಮುಳುಗಡೆಯಾದಾಗ 400 ಚದರ ಅಡಿ ಇತ್ತು. ಆ ಮನೆಗೆ ಸುಮಾರು 68 ಲಕ್ಷ ರೂಪಾಯಿಗಿಂತ ಹೆಚ್ಚು ಹಣವನ್ನು ಪರಿಹಾರ ಕೊಡಬೇಕಾಯಿತು, ಅಷ್ಟು ಬಾರಿ ಶ್ರೀಮಂತ ಕುಟುಂಬದಲ್ಲಿ ಹುಟ್ಟಿದಂತಹ ಮನುಷ್ಯ ಅವರು. ಆದರೆ ಅವರು ಕಣ್ಣಿಗೆ ಬೀಳಲಿಲ್ಲ ಅಷ್ಟೆ. ಆದರೂ ಒಂದು ರೀತಿ ಅವರು ಎಲ್ಲಿ ಹೋದರೂ ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡುತ್ತಿದ್ದರು. ವಿಧಿಬಿಂದುಗಳನ್ನು ಎತ್ತುವುದೇ ಅವರ ಕೆಲಸ. ಶಾಸನಸಭೆಯ ನಡವಳಿಕೆಗಳನ್ನು ನೋಡಿದರೆ ಅವರಷ್ಟು ವಿಧಿಬಿಂದುಗಳನ್ನು ಎತ್ತಿದವರು ಮತ್ತೊಬ್ಬರು ಇಲ್ಲ. ವಿಧಿಬಿಂದುಗಳನ್ನು ಎತ್ತಲಿಕ್ಕೆ ಶಾಸನಸಭೆ ಆಗಬೇಕೆಂದು ಏನೂ ಇಲ್ಲ.

ತಾಲ್ಲೂಕು, ಜಿಲ್ಲಾ ಪಂಚಾಯಿತಿಗಳಲ್ಲೂ ವಿಧಿಬಿಂದುಗಳುಂಟು. ಕಾಂಗ್ರೆಸ್ ಪಕ್ಷದ ಸಭೆಯಾದರೂ ವಿಧಿಬಿಂದುಗಳುಂಟು. ಚಂದ್ರಶೇಖರ್ ಅಂದರೆ ವಿಧಿಬಿಂದುಗಳು, ಅವರು ಆ ರೀತಿ ಅವರು ಇದ್ದರು.

ಬಹಳ ಮುಖ್ಯವಾಗಿ ದಿವಂಗತ ಮಹದೇವ ಬಣಕಾರ್‌ರವರು ಬಹಳ ಆತ್ಮೀಯ ಸ್ನೇಹಿತರುಗಳಲ್ಲಿ ಒಬ್ಬರು. ಕರ್ನಾಟಕ ಏಕೀಕರಣ ಸಮಿತಿಯಲ್ಲಿ ಅವರು ದುಡಿದಂತಹವರು. ಆ ಬಗ್ಗೆ ಅವರು ಇಟ್ಟುಕೊಂಡಿದ್ದಂತಹ ಕಾಳಜಿ ಬದುಕಿನುದ್ದಕ್ಕೂ ಅವರು ನಡೆದುಕೊಂಡಿರತಕ್ಕ ರೀತಿ ಅನುಕರಣೀಯ ಎನ್ನುವ ಮಾತನ್ನು ಮಾತ್ರ ಇಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ದಿವಂಗತ ಟಿ.ಎನ್.ನರಸಿಂಹಮೂರ್ತಿಯವರ ಬಗ್ಗೆ ಮಾನ್ಯ ಸಿಂಧ್ಯಾರವರು ಬಹಳ ಚೆನ್ನಾಗಿ ಹೇಳಿದ್ದಾರೆ. ಅವರಿಗೂ ನಮಗೂ ನಂಟು ಅಂದರೆ ಧರ್ಮಸ್ಥಳ ನಮ್ಮ ಕ್ಷೇತ್ರ. ಅವರ ಮಾತಿನಲ್ಲಿ ಯಾವುದೇ ಶಬ್ದ ಎತ್ತಿದರೂ ಮಂಜುನಾಥಸ್ವಾಮಿಯ ಹೆಸರು ಹೇಳದೆ ನರಸಿಂಹಮೂರ್ತಿಯವರು ಇರಲಿಲ್ಲ. ಅಷ್ಟರಮಟ್ಟಿಗೆ ಅವರು ಹೇಳುತ್ತಿದ್ದರು. ಜೊತೆಗೆ ಅವರು ಏನಾದರೊಂದು ವಿಚಾರವನ್ನು ಪ್ರತಿಪಾದನೆ ಮಾಡಬೇಕೆಂದರೆ ಅದಕ್ಕೆ ಯಾರ ಮುಲಾಜಿಲ್ಲದೆ ತನ್ನತನ ಹೇಳಿಕೊಳ್ಳುವ ರೀತಿ ಬಹುಶಃ 30 ವರ್ಷಗಳ ಕಾಲ ಮೇಲ್ಮನೆ ಸದಸ್ಯರಾಗುವುದಕ್ಕೆ ಸಾಧ್ಯವಾಯಿತೆಂದು ನಾನು ಅಂದುಕೊಂಡಿದ್ದೇನೆ. ಸಮರ್ಥರಾಗಿ ಕೆಲಸ ಮಾಡಿದರು. ಅವರು ಸಾಯುವ ಹಿಂದಿನ ದಿವಸ ಚಿಕ್ಕಮಗಳೂರಿಗೆ ಬಂದು ರಿವ್ಯೂ ಮಾಡಿಕೊಂಡು ಬಂದಿದ್ದರು. ಜಿಲ್ಲಾ ಪಂಚಾಯಿತಿ ಅಧ್ಯಕ್ಷರು ಮತ್ತು ಸದಸ್ಯರನ್ನು ಕರೆಸಿ ಮಾತನಾಡಿ ಆದ ಮೇಲೆ ಒಂದೆರಡು ದಿವಸದಲ್ಲಿ ಹೃದಯಾಘಾತದಿಂದ ನಿಧನ ಹೊಂದಿದ್ದಾರೆಂದು ಕೇಳಿ ನನಗೆ ಅತ್ಯಂತ ಆಶ್ಚರ್ಯವಾಯಿತು ಮತ್ತು ದುಃಖವಾಯಿತು. ನಿಧನರಾಗಿರತಕ್ಕವರೆಲ್ಲರಿಗೂ ನನ್ನ ಸಂತಾಪವನ್ನು ವ್ಯಕ್ತ ಮಾಡುತ್ತೇನೆ. ಡಿಸೆಂಬರ್ 13ನೇ ತಾರೀಖು ಸಂಸತ್‌ನಲ್ಲಿ ನಡೆದಂತಹ ಘಟನೆ ವಿಶೇಷವಾಗಿ ಗಮನಿಸಬೇಕಾಗಿದೆ. ಇದು ಬಹಳ ಸೂಕ್ಷ್ಮವಾದ ವಿಚಾರ. ಆ ದಿವಸ ಸಂಸತ್‌ಭವನದಲ್ಲಿ ಕೆಲಸ ಮಾಡತಕ್ಕ ಒಬ್ಬ ಸಾಮಾನ್ಯ ನೌಕರ ಗೇಟ್ ಕಾಯತಕ್ಕವನು ಬಾಗಿಲು ಹಾಕದಿದ್ದರೆ, ಏನಾಗುತ್ತಿತ್ತು ಎಂಬುದನ್ನು ಊಹಿಸಲೂ ಸಾಧ್ಯ ಇಲ್ಲ. ನಾವೆಲ್ಲಾ ಸಂಸತ್‌ನಲ್ಲಿ ಕೆಲಸ ಮಾಡಿದವರು, ಸೆಂಟ್ರಲ್ ಹಾಲ್‌ನಲ್ಲಿ ಎಲ್ಲಾ ಸದಸ್ಯರೂ ನಿರಾಯುಧರಾಗಿ ಕುಳಿತಿರುತ್ತಾರೆ, ಸಂಸತ್ ಸದಸ್ಯರು ಒಂದು ಚಾಕೂ ಕೂಡ ಒಳಗೆ ತೆಗೆದುಕೊಂಡು ಹೋಗುವ ಹಾಗೆ ಇಲ್ಲ. ಟೆರರಿಸ್ಟ್ ಏನಾದರೂ ಎಕೆ-47 ಗನ್ ತೆಗೆದುಕೊಂಡು ಒಳಗಡೆ ಹೋಗಿದ್ದಿದ್ದರೆ ಏನಾಗುತ್ತಿತ್ತು ಎಂದು ಯಾರೂ ಊಹೆ ಮಾಡುವುದಕ್ಕೆ ಸಾಧ್ಯವಿಲ್ಲ. ಆ ಭಯೋತ್ಪಾದಕರು 32 ಕೆಜಿ. ಆರ್‌ಡಿಎಕ್ಸ್ ಮತ್ತು ಒಂದು ವಾರಕ್ಕೆ ಆಗುವಷ್ಟು ಒಣದ್ರಾಕ್ಷಿ ಮತ್ತೊಂದು ಮಗದೊಂದು ಇಟ್ಟುಕೊಂಡಿದ್ದರು. ಈ ಸಿದ್ಧತೆಗಳನ್ನು ನೋಡಿದರೆ, ಯಾವುದೋ ಒಂದು ಅಮಾಯಕ ಶಕ್ತಿ ಆವೊತ್ತಿನ ದಿವಸ ಸಂಸತ್ತನ್ನು ಕಾಯ್ದಿದೆ ಎಂದು ನನಗನ್ನಿಸುತ್ತದೆ. ನ್ಯೂಯಾರ್ಕ್ ನಗರದಲ್ಲಿ ಕಟ್ಟಿದ್ದಂತಹ ಜೋಡಿ ಕಟ್ಟಡಗಳನ್ನು ಬಾಂಬ್ ಧಾಳಿ ಆದರೂ ಬೀಳುವುದಿಲ್ಲ. ಭೂಕಂಪ ಆದರೂ ಬೀಳುವುದಿಲ್ಲ ಅನ್ನುವಷ್ಟರಮಟ್ಟಿಗೆ ಡಿಸೈನ್ ಮಾಡಿದ್ದರು.

ಆದರೆ ಒಂದು ಡಿಜೆಕ್ಟೆಡ್ ಡೆಸ್ಪರೇಟ್ ಹುಡುಗರು ಆ ಕಟ್ಟಡವನ್ನು ಕೆಡವಿದರು. ಅದೇ ಒಂದು ಸಂಸ್ಥೆಯ ಸಂಬಂಧ ಇರತಕ್ಕಂಥವರು ಇಲ್ಲಿ ಪ್ರಯತ್ನ ಮಾಡಿದರು, ಆದರೆ ಅದು ಯಶಸ್ವಿಯಾಗಲಿಲ್ಲ. ಇರತಕ್ಕ ಈ ಎರಡು ವ್ಯತ್ಯಾಸಗಳನ್ನು ಗಮನಿಸಿದರೆ, ಯಾವುದೋ ಒಂದು ಅವ್ಯಕ್ತ ಶಕ್ತಿ ನಮ್ಮನ್ನು ಕಾಯಿತು ಎಂದು ನನಗನ್ನಿಸುತ್ತದೆ. ಇಲ್ಲದಿದ್ದರೆ ಆವೊತ್ತು ಸಂಸತ್‌ನಲ್ಲಿ ಆಗಬಹುದಾದ ದೊಡ್ಡ ದುರ್ಘಟನೆಯನ್ನು ತಪ್ಪಿಸುವುದಕ್ಕೆ ಅಷ್ಟು ಸುಲಭ ಸಾಧ್ಯವಾಗಿರಲಿಲ್ಲ. ಆ ದಿವಸ ಘಟನೆಯನ್ನು ತಪ್ಪಿಸಿ ನಮ್ಮ ರಾಷ್ಟ್ರಕ್ಕೆ ಅತ್ಯಂತ ದೊಡ್ಡ ಕೊಡುಗೆಯನ್ನು ಕೊಟ್ಟಂತಹ ಅಲ್ಲಿಯ ನೌಕರ ಮತ್ತು ಅಲ್ಲಿರತಕ್ಕ ಸಿಬ್ಬಂದಿವರ್ಗಕ್ಕೆ ನಿಜವಾಗಿಯೂ ಇಡೀ ದೇಶ ಋಣಿಯಾಗಿರಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಉಳಿದ ಎಲ್ಲಾ ಹಿರಿಯ ಚೇತನಗಳಿಗೆ ನನ್ನ ನಮನಗಳನ್ನು ಸಮರ್ಪಣೆ ಮಾಡಿ ತಾವೇನು ಸಂತಾಪಸೂಚನೆಯ ನಿರ್ಣಯವನ್ನು ಮಂಡನೆ ಮಾಡಿದ್ದೀರಿ, ಅದನ್ನು ನಾನು ಸಂಪೂರ್ಣವಾಗಿ ಒಪ್ಪಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಕೊನೆಯದಾಗಿ ಚಂದ್ರಕಾಂತ್ ಬೆಲ್ಲದ್‌ರವರು ಎರಡು ನಿಮಿಷ ಮಾತನಾಡುತ್ತಾರೆ, ನಂತರ ವಕೀಲ್‌ರವರು ಎರಡು ನಿಮಿಷ ಮಾತನಾಡುತ್ತಾರೆ.

+ ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ(ಧಾರವಾಡ) : ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿರತಕ್ಕ ಸಂತಾಪಸೂಚಕ ನಿರ್ಣಯಕ್ಕೆ ನನ್ನ ಸಂತಾಪವನ್ನು ವ್ಯಕ್ತಪಡಿಸುತ್ತಾ, ಹನ್ನೊಂದು ಜನ ನಾಯಕರು ರಾಜ್ಯ ಮತ್ತು ರಾಷ್ಟ್ರದಲ್ಲಿ ಎಲ್ಲಾ ವಿವಿಧ ಹಂತಗಳಲ್ಲಿ ಸೇವೆ ಸಲ್ಲಿಸಿ ನಮ್ಮನ್ನು ಅಗಲಿದ್ದಾರೆ. ಬಹಳ ಮುಖ್ಯವಾಗಿ ದೀರ್ಘಕಾಲದ ಸೇವೆ ಸಲ್ಲಿಸಿರುವಂತಹ ಅಜೀಜ್‌ಸೇಠ್‌ರವರ ಬಗ್ಗೆ ಎಲ್ಲಾ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಅವರು ಜಾತ್ಯಾತೀತ ಮನೋಭಾವದಿಂದ ಇಡೀ ರಾಜ್ಯದಲ್ಲಿ ಪ್ರತೀತಿಯನ್ನು ಪಡೆದಿದ್ದರು. ಅವರು ಕಾರ್ಮಿಕ ನಾಯಕರಾಗಿ ದೀರ್ಘವಾದ ಸೇವೆಯನ್ನು ಸಲ್ಲಿಸಿದ್ದಾರೆ. ನಮ್ಮನ್ನು ಅಗಲಿರತಕ್ಕ ಎಲ್ಲರೂ ದೀರ್ಘ ಕಾಲದ ಸೇವೆಯನ್ನು ನಾಡಿಗೆ ಮತ್ತು ರಾಷ್ಟ್ರಕ್ಕೆ ಸಲ್ಲಿಸಿದ್ದಾರೆ. ನಮ್ಮ ಜಿ.ಬಿ.ಶಂಕರರಾವ್‌ರವರು ನಾಲ್ಕು ಸಲ ಹಿರೇಕೆರೂರು ಕ್ಷೇತ್ರದಿಂದ ವಿಧಾನಸಭೆಗೆ ಆರಿಸಿ ಬಂದು ಮಂತ್ರಿಗಳಾಗಿ ವಿವಿಧ ಕೆಲಸ ಕಾರ್ಯಗಳನ್ನು ಅವರ ಕ್ಷೇತ್ರದಲ್ಲಿ ಮಾಡಿದ್ದಾರೆ. ಕಳೆದ 35 ವರ್ಷಗಳಿಂದ ಹಿರೇಕೆರೂರು ತಾಲ್ಲೂಕಿನಲ್ಲಿ ಮಾಡಿದಂತಹ ಕಾರ್ಯವನ್ನು ಮತ್ತು ಅಭಿವೃದ್ಧಿಯನ್ನು ನಾವು ನೆನಸಿಕೊಳ್ಳಬೇಕಾಗುತ್ತದೆ. ಅವರು ಶಿಕ್ಷಣ ಮಂತ್ರಿಗಳಾಗಿ ಮಾಡಿದಂತಹ ಕಾರ್ಯವನ್ನು ಸಹಿತ ಕರ್ನಾಟಕ ರಾಜ್ಯದಲ್ಲಿ ಮಾಡಿದಂತಹ ಹಿರೇಕೆರೂರಿನಲ್ಲಿ ಮಾಡಿದಂತಹ ಕೆಲಸ ಉತ್ತಮವಾಗಿದೆ. ಅಂತಹ ಕಾರ್ಯವನ್ನು ಶಿಕ್ಷಣ ಕ್ಷೇತ್ರದಲ್ಲಿ ಮಾಡಿದ್ದಾರೆ. ಗ್ರಾಮೀಣ ಪ್ರದೇಶವಾದ ಹಂಸಬಾವಿಯಲ್ಲಿ ಒಳ್ಳೆಯ ಕಾರ್ಯವನ್ನು ಮಾಡಿದ್ದಾರೆ. ಅದರಂತೆ ಬಾಳೇಕುಂದರಗಿಯವರು ಸಹಕಾರಿ ಕ್ಷೇತ್ರದಲ್ಲಿ ಒಳ್ಳೆಯ ಕಾರ್ಯವನ್ನು ಮಾಡಿದ್ದಾರೆ. ಡಾ॥ ಮಹದೇವ ಬಣಕಾರ್‌ರವರು ಬ್ಯಾಡಗಿ ತಾಲ್ಲೂಕಿನ ಸ್ವಾತಂತ್ರ್ಯ ಯೋಧರಾದಂಥ ಮೈಲಾರ ಮಹದೇವರವರ ಊರಿನಿಂದ ಮೊದಲನೆಯ ಸಲ ವಿಧಾನಸಭೆಗೆ ಆರಿಸಿ ಬಂದಿದ್ದರು. ಮೈಲಾರ ಮಹದೇವರವರ ಕ್ಷೇತ್ರ ಮೋಟೆಬೆನ್ನೂರು ಅನೇಕ ಜನ ಸ್ವಾತಂತ್ರಯೋಧರನ್ನು ನೀಡಿದಂತಹ

ಊರು. ಮೈಲಾರ ಮಹದೇವ್‌ರವರ ಕಾರ್ಯ ವೈಖರಿ ಮತ್ತು ಅವರು ಮಾಡಿದಂತಹ ಸ್ವಾತಂತ್ರ ಪ್ರೇಮವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಮೊದಲನೆಯ ಸಲ ಮಹದೇವ ಬಣಕಾರ್‌ರವರು ಶಾಸಕರಾಗಿ ಆರಿಸಿ ಬಂದರು. ನಂತರ ಮೇಲ್ಮನೆ ಸದಸ್ಯರಾಗಿದ್ದರು. ಅವರು ಸಾಹಿತ್ಯ ಕ್ಷೇತ್ರದಲ್ಲಿ ಮಾಡಿದ ಕಾರ್ಯವನ್ನು ನಾವು ಸ್ಮರಿಸಿಕೊಳ್ಳಬೇಕಾಗುತ್ತದೆ.

2.00 ಪಿಎಂ

ಇವತ್ತು ಕನ್ನಡ ಭಾಷಾ ಚಳುವಳಿಯ ಮೂಲಕ ನಾನು ಸಹಿತ ಶಾಸಕನಾಗಿ ಬಂದಿದ್ದೇನೆ. ಕನ್ನಡ ಭಾಷಾ ಚಳುವಳಿಯ ಮೂಲಕ ಬಂದಂಥ ಅವರೂ ಸಹಿತ ರಾಜ್ಯದ ಕನ್ನಡ ಕಾವಲು ಸಮಿತಿಯ ಸದಸ್ಯರಾಗಿ, ಮತ್ತು ರಾಜ್ಯ ಪತ್ರಾಗಾರದ ಸದಸ್ಯರಾಗಿ, ಕನ್ನಡ ಸರಳೀಕರಣ ಸಮಿತಿಯ ಸದಸ್ಯರಾಗಿ ಏನು ಸೇವೆ ಮಾಡಿದ್ದಾರೆ, ಅದರ ಜೊತೆಗೆ ಅವರು ಕನ್ನಡನಾಡಿನ ಭಾಷೆ ಮತ್ತು ಗಡಿ ಬಗ್ಗೆ ಅಪಾರವಾದಂಥ ಸೇವೆಯನ್ನು ಮಾಡಿದ್ದಾರೆ. ಇದರ ಜತೆಗೆ ಅವರು ಕೊಟ್ಟಂಥ ಗ್ರಂಥ ಏನಿದೆ, ಆ 'ಆಂಗ್ಲರ ಆಡಳಿತದಲ್ಲಿ ಕನ್ನಡ ಭಾಷೆ'- ಆಂಗ್ಲರು ಕನ್ನಡ ನಾಡಿಗೆ ನೀಡಿದಂಥ ಸೇವೆ ಬಗ್ಗೆ ಕೊಟ್ಟಂಥ ಗ್ರಂಥ ಏನಿದೆ, ಅದು ಬಹಳ ಅಪರೂಪವಾದ ಒಂದು ಗ್ರಂಥವಾಗಿದೆ. ಅವರು ಶರಣಸಾಹಿತ್ಯದ ಬಗ್ಗೆಯೂ ಬಹಳ ದೊಡ್ಡ ಅಭ್ಯಾಸ ಮಾಡಿದಂಥವರು ಮತ್ತು ಒಳ್ಳೆಯ ಹಾಸ್ಯ ಪ್ರವೃತ್ತಿ ಉಳ್ಳಂಥ ವ್ಯಕ್ತಿಯಾಗಿದ್ದರು. ಅವರನ್ನು ವಿಧಾನಪರಿಷತ್ತು ಮತ್ತು ವಿಧಾನಸಭೆಯ ಸದಸ್ಯರು ಎನ್ನುವುದಕ್ಕಿಂತಲೂ ಅವರು ಒಬ್ಬ ಸಾಹಿತಿಯಾಗಿ ನಾಡಿಗೆ ತಮ್ಮ ಅಪಾರವಾದಂಥ ಸೇವೆಯನ್ನು ಸಲ್ಲಿಸಿದ್ದಾರೆ. ಅದರಂತೆ ಮಾನ್ಯ ಟಿ.ಎನ್.ನರಸಿಂಹ ಮೂರ್ತಿಯವರೂ ಸಹಿತ ಒಬ್ಬ ದಕ್ಷ ಮತ್ತು ಪ್ರಾಮಾಣಿಕ ನ್ಯಾಯಾವಾದಿಯಾಗಿ ಮತ್ತು ನಮ್ಮೆಲ್ಲರಿಗೂ ಬಹಳ ಆತ್ಮೀಯರಾಗಿ, ವಿಧಾನಪರಿಷತ್ತಿನ ಮೂಲಕ ಮೂವತ್ತು ವರ್ಷಗಳ ಕಾಲ ಸುದೀರ್ಘ ಸೇವೆ ಮಾಡಿದಂಥವರಾಗಿ ಅವರೂ ಕೂಡ ನಮ್ಮ ರಾಜ್ಯಕ್ಕೆ ಸೇವೆಯನ್ನು ಮಾಡಿದ್ದಾರೆ. ಇವರುಗಳೆಲ್ಲರ ಆತ್ಮಗಳಿಗೆ ಚಿರಶಾಂತಿಯನ್ನು ಕೋರಿ, ಇವರ ಕುಟುಂಬಗಳಿಗೆ ಈ ದುಃಖವನ್ನು ಭರಿಸತಕ್ಕಂಥ ಶಕ್ತಿಯನ್ನು ಆ ಪರಮಾತ್ಮ ನೀಡಲಿ ಮತ್ತು ಅವರುಗಳ ನಿಧನದಿಂದ ಈ ರಾಜ್ಯ ಬಡವಾಗಿರುವಂಥ ಸಂದರ್ಭದಲ್ಲಿ ನಾವುಗಳೆಲ್ಲಾ ಅವರ ಕಾರ್ಯದಲ್ಲಿ ಮುನ್ನಡೆಯೋಣ ಎಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಶ್ರೀಮಾನ್ ಸೋಮಶೇಖರ್ ಮತ್ತು ಬೈರೇಗೌಡರು ಮಾತನಾಡುವುದಕ್ಕೆ ಅಪೇಕ್ಷಿಸಿದ್ದಾರೆ. ಬೈರೇಗೌಡರು ಕೋಲಾರ ಜಿಲ್ಲೆಯ ಇಬ್ಬರು ತೀರಿಕೊಂಡಿದ್ದಾರೆ, ಮತ್ತು ಸೋಮಶೇಖರ್ ಅವರು ಮಳವಳ್ಳಿಯ ಶ್ರೀಮಾನ್.........

ಶ್ರೀ ಬಿ.ಸೋಮಶೇಖರ್ : ಅಧ್ಯಕ್ಷರೇ.....

ಅಧ್ಯಕ್ಷರು : ಅನುಮತಿ ಕೊಡುವುದಕ್ಕೋಸ್ಕರ ನಾನು ಪೀಠಿಕೆಯಾಗಿ ಹೇಳುತ್ತಿದ್ದೇನೆ. ಮಾತನಾಡಿ.

+ ಶ್ರೀ ಬಿ.ಸೋಮಶೇಖರ್ (ಮಳವಳ್ಳಿ) : ಮಾನ್ಯ ಸಭಾಧ್ಯಕ್ಷರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಈಗಾಗಲೇ ಈ ಅಧಿವೇಶನದಲ್ಲಿ ಮತ್ತು ಹಿಂದಿನ ಅಧಿವೇಶನದ ಮಧ್ಯದಲ್ಲಿ ದೈವಾಧೀನರಾದಂಥ ನಮ್ಮ ಮುಖಂಡರುಗಳ ಬಗ್ಗೆ ಸಂತಾಪಸೂಚನೆಯನ್ನು ತಾವೇನು ಮಂಡಿಸಿದ್ದೀರಿ, ಅದಕ್ಕೆ ನನ್ನ ಸಂಪೂರ್ಣವಾದಂಥ ಬೆಂಬಲವನ್ನು ಸೂಚಿಸುತ್ತಾ, ಮಾನ್ಯ ಅಜೀಜ್‌ಸೇಠ್‌ರವರು ಮತ್ತು ಚಂದ್ರಶೇಖರಮೂರ್ತಿಯವರು ಹಾಗೂ ಟಿ.ಎನ್.ನರಸಿಂಹಮೂರ್ತಿಯವರು ಬಹಳ ಹಳೆಯ ನಾಯಕರುಗಳು, ಅಜೀಜ್‌ಸೇಠ್ ಅವರ ಬಗ್ಗೆ ಹೇಳಬೇಕೆಂದರೆ, ನನಗೆ ಅವರ ಸಂಪರ್ಕ ಅಷ್ಟಾಗಿ ಇಲ್ಲದಿದ್ದರೂ ಕೂಡ ಸ್ವಲ್ಪ ದಿವಸಗಳ ಕಾಲ ಒಟ್ಟಿಗೆ ಕೆಲಸ ಮಾಡತಕ್ಕಂಥ ಅವಕಾಶ ಸಿಕ್ಕಿತ್ತು. ಅಷ್ಟರಲ್ಲೇ ನನಗೆ ಅವರ ಬಗ್ಗೆ ಬಹಳ ಗೌರವ ಮೂಡಿತ್ತು. ಅವರು ನೇರವಾಗಿ ಮಾತನಾಡತಕ್ಕಂಥ ವ್ಯಕ್ತಿಯಾಗಿದ್ದರು. ಅವರು ನಿಜವಾದಂಥ ಬಡವರ ನಾಯಕರಾಗಿದ್ದರು. ಈ ರಾಜ್ಯದ ಯಾವುದೇ ಒಂದು ಬಡಜನತೆ ಅದು ಮುಸಲ್ಮಾನ್ ಜನಾಂಗದವರು ಇರಬಹುದು, ದಲಿತರು ಇರಬಹುದು, ಕಾರ್ಮಿಕರು ಇರಬಹುದು, ಅವರೆಲ್ಲರೂ ಅಜೀಜ್‌ಸೇಠ್‌ರು ನಮ್ಮ ನಾಯಕರು ಎನ್ನತಕ್ಕಂಥಾದ್ದನ್ನು ಬಹಳ ಅಭಿಮಾನದಿಂದ ಹೇಳುತ್ತಿದ್ದರು. ಅಂದರೆ ಅವರು ಯಾವಾಗಲೂ ಬಡಜನರಿಗೋಸ್ಕರ ಹೋರಾಟ ಮಾಡಿದಂಥ ವ್ಯಕ್ತಿಯಾಗಿದ್ದರು. ಅವರಲ್ಲಿ ಮತ್ತೊಂದು ವಿಶೇಷವಾದ ಗುಣ ಏನಿತ್ತು ಎಂದರೆ ಅವರು ಬಹಳ ಸರಳಜೀವಿಯಾಗಿದ್ದರು. ಅವರಿಗೆ ತಾನು ವಯಸ್ಸಾದವನಾಗಿದ್ದೇನೆ, ಹಿರಿಯ ರಾಜಕಾರಣಿ ಎಂಬ ಹಮ್ಮು ಇರಲಿಲ್ಲ. ನನಗೆ ಜ್ಞಾಪಕ ಇದೆ, ಅವರು ಆಗ ಮಂತ್ರಿಯಾಗಿರಲಿಲ್ಲ. ನಾನು ಮಂತ್ರಿಯಾಗಿರುವಾಗ ಒಂದು ಕೆಲಸಕ್ಕೆ ನನ್ನ ಮನೆಗೇ ಬಂದಿದ್ದರು. ನಾನು ಅವರಿಗೆ 'ನೀವು ಹಿರಿಯರು, ಫೋನಿನಲ್ಲಿ ಹೇಳಿದ್ದರೆ ಆಗುತ್ತಿತ್ತು ಅಥವಾ ನಾನೇ ನಿಮ್ಮ ಹತ್ತಿರ ಬರುತ್ತಿದ್ದೆ' ಎಂದು ಹೇಳಿದಾಗ ಅವರು ಹೇಳಿದರು 'ಇಲ್ಲಪ್ಪ, ನೀನು ಮಂತ್ರಿಯಾಗಿದ್ದಿ, ನನ್ನ ಕೆಲಸಕ್ಕೆಂದು ನಿನ್ನ ಕಡೆಗೆ ಬಂದಿದ್ದೇನೆ' ಎಂದು. ಅಂದರೆ ಅವರು ಅಷ್ಟೊಂದು ಸರಳಜೀವಿಯಾಗಿದ್ದರು. ಅವರು ನಿಧನದಿಂದಾಗಿ ದಲಿತವರ್ಗದವರಿಗೆ, ಹಿಂದುಳಿದವರ್ಗಗಳಿಗೆ ಬಹಳ ನಷ್ಟವಾಗಿದೆ. ಅದೇ ರೀತಿ ಚಂದ್ರಶೇಖರಮೂರ್ತಿಯವರು ನಮ್ಮ ಊರಿನವರೇ, ಅವರು ಸುಮಾರು ಆರು ಸಲ ಲೋಕಸಭೆಗೆ ಆಯ್ಕೆಯಾಗಿದ್ದರು, ನಾನು ನಾಲ್ಕು ಬಾರಿ ಆಯ್ಕೆಯಾಗಿದ್ದೇನೆ. ಒಂದೇ ಊರಿನವರಾಗಿದ್ದರೂ, ಬೇರೆಬೇರೆ ಪಕ್ಷಗಳಲ್ಲಿ ಇದ್ದರೂ ಕೇವಲ ಎರಡು-ಮೂರು ಸಭೆಗೆ ಮಾತ್ರ ನಾವು ಒಟ್ಟಿಗೆ ಭಾಗವಹಿಸಿದ್ದೇವೆ. ಅಂದರೆ ಅಷ್ಟೊಂದು ಸಂಪರ್ಕವನ್ನು ನಾವು ಇಟ್ಟುಕೊಂಡಿರಲಿಲ್ಲ. ಆದರೂ ಅವರನ್ನು ನಾನು ಗೌರವಿಸುತ್ತಿದ್ದೆ ಮತ್ತು ಅವರು ನನ್ನನ್ನು ಗೌರವಿಸುತ್ತಿದ್ದರು. ಅಷ್ಟೊಂದು ಒಳ್ಳೆಯ ವ್ಯಕ್ತಿತ್ವ ಅವರದ್ದಾಗಿತ್ತು. ಅವರು ಯಾರಿಗೂ ಸಹಿತ ಕೆಟ್ಟದ್ದು ಮಾಡಿದವರಲ್ಲ. ಹೀಗಾಗಿ ನಾವು ಬೇರೆಬೇರೆ ಪಕ್ಷಗಳಲ್ಲಿ ಇದ್ದರೂ ಕೂಡ ನಮ್ಮ ನಡುವೆ ಯಾವುದೇ ಭಿನ್ನಾಭಿಪ್ರಾಯವಾಗಲೀ, ಸಂಘರ್ಷವಾಗಲೀ ಬರಲಿಲ್ಲ. ಮುಂದೆ ಕೂಡ ಇದೇ ರೀತಿ ಇರಬೇಕೆಂದು ನನ್ನ ಭಾವನೆ. ನೋಡೋಣ, ಅದು ಎಷ್ಟರಮಟ್ಟಿಗೆ ಆಗುತ್ತದೆ ಎಂದು.

ಮಾನ್ಯ ಸದಸ್ಯರು : ಹಾಗೆಂದರೆ ಏನು?

ಶ್ರೀ ಬಿ.ಸೋಮಶೇಖರ್:- ಈ ಪ್ರಜಾಪ್ರಭುತ್ವದಲ್ಲಿ ಶಾಸಕರು ಮತ್ತು ಲೋಕಸಭಾ ಸದಸ್ಯರು ಯಾವುದೇ ಪಕ್ಷದಲ್ಲಿದ್ದರೂ ಒಂದಾಗಿ ಕೆಲಸ ಮಾಡತಕ್ಕಂಥ ಔದಾರ್ಯವನ್ನು ತೋರಿಸತಕ್ಕಂಥ ವಾತಾವರಣ ಇರಬೇಕೆಂದು ನಾನು ಆಸೆಪಡುತ್ತಿದ್ದೇನೆ, ಅಷ್ಟೆ, ಮತ್ತೆ ಟಿ.ಎನ್.ನರಸಿಂಹಮೂರ್ತಿಯವರು ದಲಿತ ಕುಟುಂಬದಲ್ಲಿ ಹುಟ್ಟಿದರೂ ಕೂಡ ರಾಜಕಾರಣದಲ್ಲಿ ಎಲ್ಲರ ಪ್ರೀತಿವಿಶ್ವಾಸ ಗಳಿಸಿದ್ದರು. ಅವರು ಯಾವಾಗಲೂ ಕೋಪಗೊಂಡಿದ್ದನ್ನೇ ನಾನು ನೋಡಿಲ್ಲ. ಅವರು ಸದಾ ನಗುನಗುತ್ತಲೇ ಇರುತ್ತಿದ್ದರು. ನಾನು ಬೇರೆ ಪಕ್ಷದಲ್ಲಿದ್ದರೂ ಕೂಡ ಅವರು ನನ್ನನ್ನು ಬಹಳ ಪ್ರೀತಿಯಿಂದ ಕಾಣುತ್ತಿದ್ದರು. ನನಗೆ ಎಷ್ಟೋ ಸಲ ಹೇಳುತ್ತಿದ್ದರು 'ನೀವು ಈ ಪಕ್ಷದಲ್ಲಿ ಉತ್ತಮವಾದಂಥ ನಾಯಕರಾಗಿ ಬೆಳೆಯುತ್ತೀರಿ' ಎಂದು. ಅವರು ಯಾವುದೇ ಒಂದು ಸಂದರ್ಭದಲ್ಲಿಯೂ ಸುದ್ದಿಯಲ್ಲಿರುತ್ತಿದ್ದರು. ಯಾವುದೇ ಒಂದು ಘಟನೆಯಾದರೂ ಅವರು ನ್ಯೂಸ್‌ನಲ್ಲಿ ಇರುತ್ತಿದ್ದರು. ಅವರು ನಿಧನರಾದ ತಕ್ಷಣ ನಾನು ಅವರ ಮನೆಗೆ ಹೋಗಿದ್ದೆ. ಅವರ ನಿಧನದಿಂದ ಇಡೀ ದಲಿತವರ್ಗಕ್ಕೇ ಅಲ್ಲ, ಇಡೀ ಕರ್ನಾಟಕದ ರಾಜಕಾರಣಕ್ಕೆ ತುಂಬಲಾರದ ನಷ್ಟವಾಗಿದೆ. ಈ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ಭಗವಂತನು ಕೊಡಲೆಂದು ಹಾರೈಸುತ್ತೇನೆ. ಹಾಗೆಯೇ ನಮ್ಮ ರಾಜಗೋಪಾಲ್- ಕೆ.ಜಿ.ಎಫ್.ನವರು, ಅವರ ಬಗ್ಗೆ 1977ರಲ್ಲೇ ನನಗೆ ಪರಿಚಯ ಇತ್ತು. ಈ ಡಿ.ರಾಜಗೋಪಾಲ್ ಮತ್ತು ಈ ರಾಜಗೋಪಾಲ್ ಇಬ್ಬರೂ ಸ್ನೇಹಿತರಾಗಿದ್ದರು. ಅವರ ಒಂದು ಸಂಗದಲ್ಲಿ ನಾನು ಇದ್ದೆ. ಆದ್ದರಿಂದ ಅವರು ಬಹಳ ಚೆನ್ನಾಗಿ ನನಗೆ ಗೊತ್ತಿದ್ದರು. ಅದೇ ರೀತಿ ನಮ್ಮ ಬಸಪ್ಪನವರು, ಮಹದೇವ ಬಣಕಾರ್ ಅವರು, ಬಾಳೆಕುಂದರಗಿ ಅವರೆಲ್ಲರೂ ನಿಧನರಾಗಿರತಕ್ಕದ್ದು ನಮಗೆ ಬಹಳ ದುಃಖವಾಗಿದೆ. ಇವರೆಲ್ಲರ ನಿಧನಕ್ಕೆ ತಾವೇನು ಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ, ಅದಕ್ಕೆ ನಾನು ಸಂಪೂರ್ಣವಾದ ಬೆಂಬಲ ಸೂಚಿಸಿ, ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಕೊನೆಯದಾಗಿ ಶ್ರೀ ಭೈರೇಗೌಡರು ಮಾತನಾಡುತ್ತಾರೆ.

+ ಶ್ರೀ ಸಿ.ಭೈರೇಗೌಡ(ವೇಮಗಲ್) : ಸನ್ಮಾನ್ಯ ಸಭಾಧ್ಯಕ್ಷರೇ, ಇವತ್ತಿನ ಸಂತಾಪಸೂಚಕ ನಿರ್ಣಯಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತಾ, ಈಗಾಗಲೇ ಅಜೀಜ್‌ಸೇಠ್‌ರ ಬಗ್ಗೆ ಮಾನ್ಯ ಚಂದ್ರೇಗೌಡರು ಬಹಳ ಚೆನ್ನಾಗಿ ಹೇಳಿದ್ದಾರೆ. ನಾನೇನಾದರೂ ಪುನಃ ಅದನ್ನು ಹೇಳುವುದಕ್ಕೆ ಹೋದರೆ ಅದನ್ನು ಕೆಡಿಸಿದ ಹಾಗೆ ಆಗುತ್ತದೆ. ಬಹಳ ಸುಂದರವಾಗಿ, ಬಹಳ ಚೆನ್ನಾಗಿ, ಬಹಳ ಆಫ್ಟ್ ಆಗಿ ಅವರು ಹೇಳಿರತಕ್ಕದ್ದನ್ನು ನಾನು ಮನಸಾರೆ ಮೆಚ್ಚುತ್ತೇನೆ ಮತ್ತು ಅನುಮೋದಿಸುತ್ತೇನೆ. ಆದರೆ ಒಂದು ಮಾತನ್ನು ಅವರ ಬಗ್ಗೆ ಹೇಳುವುದಾದರೆ, ಅವರು ಬಹಳ ಆತ್ಮೀಯರಾದಂಥ ಸ್ನೇಹಿತರಾಗಿದ್ದರು. ಸ್ನೇಹತ್ವಕ್ಕೆ ಏನಾದರೂ ಹೆಸರು ಕೊಡಬೇಕಾಗಿದ್ದರೆ ಅದಕ್ಕೆ ಅಜೀಜ್‌ಸೇಠ್ ಅವರ ಹೆಸರು ಇಡತಕ್ಕದ್ದು ಸೂಕ್ತವೆಂದು ನನ್ನ ಅನಿಸಿಕೆ. ಅವರು ಈ ಬಹಳ ಬಡವರ್ಗದ, ಸಾಮಾನ್ಯವರ್ಗದ ಜನರ ಆರಾಧ್ಯಮೂರ್ತಿಯಾಗಿದ್ದರು. ಕಾರಣ ಏನೆಂದರೆ,

ಅವರು ಆ ವರ್ಗದ ಜನರಲ್ಲಿ ಇಟ್ಟಂಥ ಕಾಳಜಿಯಿಂದಾಗಿ ಅವರ ಜೊತೆಯಲ್ಲಿ ಮಾತನಾಡುವಾಗ ಸರಳವಾದಂಥ ಭಾಷೆಯಲ್ಲೇ ಮಾತನಾಡುತ್ತಿದ್ದರು ಮತ್ತು ಅವರದ್ದೇ ಆದ ಭಾಷೆಯಲ್ಲಿ ಸಾಮಾನ್ಯ ಜನರ ಭಾಷೆಯಲ್ಲಿ ಮಾತನಾಡುತ್ತಿದ್ದರು. ಆದ್ದರಿಂದ ಎಲ್ಲರೂ ಅವರ ಮಾತನ್ನು ಕೇಳುತ್ತಿದ್ದರು. ಅದರಲ್ಲೂ ಮುಸ್ಲಿಂ ಜನಾಂಗದಲ್ಲಿಯೇ ಬಡವರ ಸಂಖ್ಯೆ ಅತಿ ಹೆಚ್ಚು ಇರತಕ್ಕದ್ದು. ಇವರ ಮಾತು ಎಂದರೆ ಅವರೆಲ್ಲರೂ ಸಹ ಚಾಚೂ ತಪ್ಪದೆ ಪಾಲಿಸತಕ್ಕಂಥ ಪ್ರತೀತಿ ರಾಜ್ಯದಲ್ಲಿ ಬೆಳೆದು ಬಂದಿದ್ದರೆ ಆ ವರ್ಗದ ಜನತೆ ಬಗ್ಗೆ ಅವರು ಇಟ್ಟಂಥ ಪ್ರೀತಿ, ಅವರ ಬಗ್ಗೆ ಅವರು ನಡೆದುಕೊಳ್ಳುತ್ತಿದ್ದಂಥ ರೀತಿ ಯಾವರೀತಿ ಇತ್ತು ಎಂದು ತಿಳಿಯಬಹುದು ಎಂದು ಇಲ್ಲಿ ಸೇರಿಸುವುದಕ್ಕೆ ನಾನು ಇಷ್ಟಪಡುತ್ತೇನೆ. ಅದೇ ರೀತಿಯಲ್ಲಿ ನಮ್ಮ ಜಿಲ್ಲೆಯ ದೊರೆಸ್ವಾಮಿ ನಾಯ್ಡು ಅವರು ವಯಸ್ಸಿನಲ್ಲಿ ಕೂಡ ಹಿರಿಯರು. ನಾನು ಮತ್ತು ಅವರು ಈ ಸಭೆಯನ್ನು ಪ್ರವೇಶ ಮಾಡಿದ್ದು ಒಂದೇ ಸಾರಿ, 1972ನೇ ಇಸವಿಯಲ್ಲಿ. ಆವತ್ತೂ ಕೂಡ ಅವರು ನಮಗೆ ಹಿರಿಯರಾಗಿ ಮಾರ್ಗದರ್ಶಕರಾಗಿ ಕೆಲಸ ಮಾಡಿದರು. ಸ್ವಾಮಿ, ಇಲ್ಲಿ ಒಂದು ತಪ್ಪಾಗಿದೆ. ಅವರು ಜನಿಸಿದ್ದು ಬೇತಮಂಗಲದಲ್ಲಿ ಎಂದು ಇದೆ. ಅದನ್ನು ತಿದ್ದುಪಡಿ ಮಾಡಬೇಕೆಂದು ನಾನು ವಿನಂತಿಸಿದ್ದೆ. ಅದು ಅವರು ಬಂಗಾರಪೇಟೆ ತಾಲ್ಲೂಕಿನ ಕಂಗಾಂಡಲಹಳ್ಳಿಯಲ್ಲಿ ಅವರು ಹುಟ್ಟಿರತಕ್ಕದ್ದು. ಬಹಳ ದೊಡ್ಡ ರೈತ, ವ್ಯವಸಾಯ ಕುಟುಂಬದಲ್ಲಿ ಅವರು ಹುಟ್ಟಿದ್ದರು. ರೈತರನ್ನು ಬಹಳ ಆತ್ಮೀಯವಾಗಿ ಅವರು ಪ್ರೀತಿಸುತ್ತಿದ್ದರು. ಜೊತೆಗೆ ಅವರು ಈ ರೈತರು ಬೆಳೆಯತಕ್ಕಂಥ ಉತ್ಪನ್ನಗಳು ಏನಿವೆ, ಅವನ್ನು ಸಂಸ್ಕರಣ ಮಾಡಿಸಬೇಕು, ರೈತರು ಬೆಳೆಯತಕ್ಕಂಥ ಬೆಳೆಗೆ ಮೌಲ್ಯವೃದ್ಧಿ ಮಾಡಬೇಕು ಎನ್ನತಕ್ಕಂಥ ಕಾರಣದಿಂದಲೇ ಅವರೇ ಒಂದು ಖಂಡಸಾರಿ ಸಕ್ಕರೆ ಕಾರ್ಖಾನೆಯನ್ನು ಕೂಡ ಸ್ಥಾಪಿಸಿದರು. ಅವರು ಲಾಭ ಪಡೆದಿದ್ದಕ್ಕಿಂತ ಹೆಚ್ಚಾಗಿ ನಷ್ಟವನ್ನೇ ಇದರಿಂದ ಅನುಭವಿಸಿದರು. ಸುತ್ತಮುತ್ತ ಇರತಕ್ಕಂಥ ಅನೇಕ ರೈತ ಕುಟುಂಬಗಳಿಗೆ ಆರ್ಥಿಕವಾಗಿ ನೆರವಾಗತಕ್ಕಂಥ ಪ್ರಯೋಗವನ್ನು ಕೂಡ ಅವರು ನಡೆಸಿದರು. ಬಹಳ ಚೆನ್ನಾಗಿ ವ್ಯವಸಾಯಗಾರರಾಗಿರತಕ್ಕಂಥ ಯಾರಾದರೂ ಕೂಡ ಏನಾದರೂ ಹಾಗೆಹೀಗೆ ವ್ಯವಸಾಯ ಮಾಡಬೇಕು ಎಂದರೆ ಅವರು ಮಾಡುತ್ತಿದ್ದಂಥ ವ್ಯವಸಾಯ ರೀತಿಯನ್ನು ನೋಡಿಕೊಂಡು ಬರಬೇಕು ಎನ್ನತಕ್ಕಂಥ ಪ್ರತೀತಿ ಕೂಡ ನಮ್ಮ ಭಾಗದಲ್ಲಿ ಇತ್ತು. ನಮ್ಮಂತಹವರಿಗೆ ಮಾರ್ಗದರ್ಶಕರಾಗಿ ಕೆಲಸ ಮಾಡಿದ್ದಾರೆ. ಸದಾಕಾಲ ನಮ್ಮನ್ನು ಬೆಂಬಲಿಸುತ್ತಿದ್ದರು. ನಮ್ಮ ಜಿಲ್ಲೆಯಲ್ಲಿ ಒಂದು ಪ್ರಬಲ ಶಕ್ತಿಯಾಗಿ ಇದ್ದಂತಹವರು. ಅವರು ಕಣ್ಮರೆಯಾಗಿದ್ದಾರೆ. ಇನ್ನು ಶ್ರೀ ರಾಜಗೋಪಾಲ್ ಅವರು ಕಾರ್ಮಿಕ ನಾಯಕರಾಗಿದ್ದಂತಹವರು. ಕಮ್ಯುನಿಸ್ಟ್ ಚಳುವಳಿಯ ಬಳುವಳಿಯಾಗಿದ್ದರು. ಅವರ ಮೂಲ ಇರತಕ್ಕಂಥಾದ್ದು ಕಮ್ಯುನಿಸ್ಟ್ ಚಳುವಳಿಯಲ್ಲಿ, ಅವರ ಬೇರುಗಳು ಇರತಕ್ಕಂಥಾದ್ದು ಕಮ್ಯುನಿಸ್ಟ್ ಚಳುವಳಿಯಲ್ಲಿ, ಕಮ್ಯುನಿಸ್ಟ್ ಚಳುವಳಿಯನ್ನು ಬೆಳೆಸಿ, ಅದರ ಮೂಲಕ ಈ ಸದನವನ್ನು ಪ್ರವೇಶ ಮಾಡಿರತಕ್ಕಂಥವರು, ಶ್ರಮ ಜೀವಿ ವರ್ಗದ ಆಶಾಕಿರಣವಾಗಿ ಅವರು ಈ ಸದನವನ್ನು ಪ್ರವೇಶ ಮಾಡಿ ಕೊನೆ ಉಸಿರು ಇರುವವರೆಗೂ ಕೂಡ ಅವರಿಗೋಸ್ಕರ ದುಡಿದಿರತಕ್ಕಂಥವರು. ಈಗ ಕೋಲಾರ ಚಿನ್ನದ ಗಣಿ ಮುಚ್ಚಿದೆ. ಈ ಸಂದರ್ಭದಲ್ಲಿ ಅವರು ಅನೇಕ ಸಂದರ್ಭಗಳಲ್ಲಿ ನನ್ನನ್ನು ಭೇಟಿಯಾಗಿ, ಈ ಕಾರ್ಮಿಕರ ಹಿತಚಿಂತನೆಯನ್ನು ಯಾವ ರೀತಿ ಮಾಡಬೇಕು ಎನ್ನತಕ್ಕಂಥದ್ದನ್ನು ಅವರೇ ಯೋಚನೆ ಮಾಡಿ ಅನೇಕ

ಸಲಹೆಗಳನ್ನು ನೀಡಿರತಕ್ಕಂಥವರು. ಶ್ರಮ ಜೀವಿ ವರ್ಗದ ಪ್ರತಿನಿಧಿಯಾಗಿದ್ದವರು ಅವರು ಇವತ್ತು ಕಣ್ಮರೆಯಾಗಿದ್ದಾರೆ. ಅವರ ನಿಧನ ಈ ಶ್ರಮ ಜೀವಿ ವರ್ಗಕ್ಕೆ ಆಗಿರತಕ್ಕಂಥ ನಷ್ಟ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಉಳಿದ ದಿವಂಗತರ ಬಗ್ಗೆ ನನ್ನ ಸ್ನೇಹಿತರು ಹೇಳಿದ್ದಾರೆ. ಅದರಲ್ಲೂ ಮುಖ್ಯವಾಗಿ ಮಾನ್ಯ ನರಸಿಂಹಮೂರ್ತಿಯವರ ಬಗ್ಗೆ ನಾನು ಹೇಳಲೇಬೇಕಾಗುತ್ತದೆ. ಕಾರಣ ಏನೆಂದರೆ ನಾನು ಮತ್ತು ಅವರು ಬೆಂಗಳೂರಿನಲ್ಲಿರತಕ್ಕಂಥ ಇಂಟರ್‌ಮೀಡಿಯಟ್ ಕಾಲೇಜ್‌ನಲ್ಲಿ ಓದುತ್ತಿದ್ದೆವು. ಆಗ ವಾಲಿಬಾಲ್ ತಂಡದಲ್ಲಿ ನಾನು ಮತ್ತು ಇವರು ಇರುತ್ತಿದ್ದೆವು. ಜೊತೆಗೆ ಅವರು ಮೊದಲನೇ ಸಲ ವಿಧಾನ ಪರಿಷತ್ತನ್ನು ಪ್ರವೇಶ ಮಾಡಿದಂತಹ ಸಂದರ್ಭದಲ್ಲಿ ನಾನು ಅವರಿಗೆ ಮತ ಹಾಕಿ ಗೆಲ್ಲತಕ್ಕಂಥಾದ್ದಕ್ಕೆ ಒಂದು ಅವಕಾಶ ನನಗೆ ಒದಗಿ ಬಂದಿತ್ತು. ಕೊನೆಗೆ ಶಾಸಕರ ಭವನದಲ್ಲಿ ಸಹ ಕೊಠಡಿ ಸಂಖ್ಯೆ 107 ಮತ್ತು 108 ರಲ್ಲಿ ಪಕ್ಕಪಕ್ಕದಲ್ಲಿಯೇ ಇದ್ದೆವು. ಆ ಕಾಲದಿಂದಲೂ ಸಹ ಅವರು ನನಗೆ ಬಲ್ಲವರಾಗಿದ್ದರು, ಆತ್ಮೀಯರಾಗಿರತಕ್ಕಂಥವರು. ಮಾನ್ಯ ಅಧ್ಯಕ್ಷರು ಸೂಚಿಸಿರತಕ್ಕಂಥ ಎಲ್ಲಾ ಸದಸ್ಯರ ಹೆಸರುಗಳನ್ನು ಹೇಳಲು ಸಮಯದ ಅಭಾವವಿರುವುದರಿಂದ ಅವರ ಹೆಸರುಗಳನ್ನು ನಾನು ಹೇಳದೇ ಅವರೆಲ್ಲರಿಗೂ ನಾನು ನನ್ನ ಶ್ರದ್ಧಾಂಜಲಿಯನ್ನು ಅರ್ಪಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಎಲ್ಲಾ ಶ್ರೀಯುತರ ಗೌರವಾರ್ಥವಾಗಿ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರೂ ಎದ್ದುನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು : ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಲಾಗುವುದು. ಈಗ ಸದನವನ್ನು ನಾಳೆ (22.1.2002) ಬೆಳಿಗ್ಗೆ 11-00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 2-00 ಗಂಟೆ 10 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 22-1-2002ರ ಮಂಗಳವಾರ ಬೆಳಿಗ್ಗೆ 11-00 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)